# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **609** |
| ಸದಸ್ಯರ ಹೆಸರು | : | ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | **16.09.2021** |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿರವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬಿಡಿಎ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್ ಯಾವ ಕಾನೂನಿನಡಿ ನೋಂದಣಿಯಾಗಿದೆ; ಈ ಕಾನೂನಿನಡಿ ನೋಂದಣಿಯಾಗಿರುವ ಸಂಘಕ್ಕೆ ಪ್ರಾಧಿಕಾರದಿಂದ ಜಮೀನು ನೀಡುವ ಅಧಿಕಾರ ಇದೆಯೇ; ಇದ್ದಲ್ಲಿ, ಪ್ರಾಧಿಕಾರವು ಯಾವ ಕಾನೂನಿನಡಿ ಎಷ್ಟು ಎಕರೆ ಜಮೀನನ್ನು ಎಲ್ಲೆಲ್ಲಿ ನೀಡಲಾಗಿದೆ; (ಸರ್ವೆ ನಂಬರ್‌ವಾರು, ವಿಸ್ತೀರ್ಣವಾರು ವಿವರ ನೀಡುವುದು) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಕ್ಷೇಮಾಭಿವೃದ್ಧಿ ಸಂಘದವರು ಕರ್ನಾಟಕ ಸಂಸ್ಥೆಗಳ ನೋಂದಣಿ ಕಾಯ್ದೆ–1960ರ ಕಲಂ–13ರನ್ವಯ ಸಂಘವನ್ನು ನೋಂದಾಯಿಸಿಕೊಂಡು ಬೈಲಾಗಳನ್ನು ರೂಪಿಸಿ ದಿನಾಂಕ:20.10.2001 ರಂದು ಸಹಕಾರ ಸಂಘದಿಂದ ಅನುಮೋದನೆ ಪಡೆದುಕೊಂಡಿದ್ದ ಮೂಲ ಬೈಲಾಗೆ ದಿನಾಂಕ:03.08.2006 ಎಂದು ತಿದ್ದುಪಡಿ ಬೈಲಾವನ್ನು ಅನುಮೋದನೆ ಪಡೆದುಕೊಂಡಿರುತ್ತಾರೆ.<br><br>ಸರ್ಕಾರದ ಆದೇಶ ಸಂಖ್ಯೆ:ನಅಇ/40/ಬೆಂಆಸೇ/2006 ದಿನಾಂಕ:19.04.2006ರಂತೆ ಪ್ರಾಧಿಕಾರದ ನೌಕರರ ಸಂಘಕ್ಕೆ ಅದರ ನೌಕರರಿಗೆ ನಿವೇಶನಗಳನ್ನು ಹಂಚುವ ಸಲುವಾಗಿ ಜಮೀನನ್ನು ಸಗಟಾಗಿ ಹಂಚಿಕೆ ಮಾಡುವ ಬಗ್ಗೆ ತಾತ್ವಿಕ ಅನುಮೋದನೆ ನೀಡಲಾಗಿರುತ್ತದೆ.<br><br>ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ದೊಡ್ಡಕಲ್ಲಸಂದ್ರ ಗ್ರಾಮದಲ್ಲಿ ಒಟ್ಟು 33 ಎಕರೆ 2 ಗುಂಟೆ ಜಮೀನಿನ ವಿಸ್ತೀರ್ಣವನ್ನು ನೋಂದಣಿ ಸಂಖ್ಯೆ:4719 ದಿನಾಂಕ:09.11.2006 ರಂದು ನೋಂದಣಿ ಮಾಡಲಾಗಿರುತ್ತದೆ. ವಿವರ ಕೆಳಕಂಡಂತಿರುತ್ತದೆ:–<br>1. ಸರ್ವೆ ನಂ.15(ಭಾಗ) 8 ಎಕರೆ 26 ಗುಂಟೆ<br>2. ಸರ್ವೆ ನಂ.16(ಭಾಗ) 5 ಎಕರೆ 22 ಗುಂಟೆ<br>3. ಸರ್ವೆ ನಂ.17(ಭಾಗ) 18 ಎಕರೆ 34 ಗುಂಟೆ<br>**ಒಟ್ಟು 33 ಎಕರೆ 02 ಗುಂಟೆ**<br><br>ಆದರೆ, ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ.15(ಭಾಗ), 16(ಭಾಗ), 17(ಭಾಗ) ವಾಸ್ತವವಾಗಿ 27 ಎಕರೆ 15 ½ ಗುಂಟೆ ಮಾತ್ರ ಅಳತೆಯುಳ್ಳದ್ದಾಗಿದ್ದರಿಂದ ಈ ವಿಸ್ತೀರ್ಣಕ್ಕೆ ನೋಂದಣಿ ಸಂಖ್ಯೆ:683 ದಿನಾಂಕ:12.06.2013 ರಂದು ತಿದ್ದುಪಡಿ ಪತ್ರ ನೋಂದಣಿ ಮಾಡಲಾಗಿರುತ್ತದೆ ಮತ್ತು ಲಿಂಗಧೀರನಹಳ್ಳಿ ಬಡಾವಣೆಯಲ್ಲಿ ಹಂಚಿಕೆ ಮಾಡಿರುವ ಜಮೀನಿನ ವಿವರ ಕೆಳಕಂಡಂತಿರುತ್ತದೆ:– |

| ಸರ್ವೆ ನಂ. | ವಿಸ್ತೀರ್ಣ | ಕ್ರಯಪತ್ರ ದಿನಾಂಕ |
|---|---|---|
| 06(ಪಿ) | 07 ಎಕರೆ | 13.06.2007 |
| 06(ಪಿ), 7(ಪಿ) | 05 ಎಕರೆ | 14.11.2007 |
| 06(ಪಿ), 7(ಪಿ) | 03 ಎಕರೆ | 28.06.2011 |

..2ಕ್ಕೆ

<table>
<tr>
<td>(ಆ)</td>
<td>ಬಿಡಿಎಗೆ ಸಂಘದವರು ಅಧ್ಯರ್ಪಿಸಿದ್ದ ಒಂದು ಎಕರೆ ಸಿ.ಎ. ನಿವೇಶನವನ್ನು ಸಂಘದ ಅಧ್ಯಕ್ಷರು ಅಕ್ರಮವಾಗಿ ಮಾರಾಟ ಮಾಡಿದ್ದು ನಿಜವೇ; ಹಾಗಿದ್ದಲ್ಲಿ, ಇದಕ್ಕೆ ಕಾರಣರಾದ ಸಂಘದ ಪದಾಧಿಕಾರಿಗಳು ಮತ್ತು ಶಾಮೀಲಾಗಿದ್ದ ಅಧಿಕಾರಿ/ನೌಕರರ ವಿರುದ್ಧ ಕೈಗೊಂಡ ಕ್ರಮಗಳ ವಿವರವನ್ನು ನೀಡುವುದು; (ನಿವೃತ್ತರಾದ ಅಧಿಕಾರಿ/ನೌಕರರು ಸೇರಿದಂತೆ ಪಿಂಚಣಿ ನಿಲ್ಲಿಸಲಾಗಿದೆಯೇ;)</td>
<td>ಹೌದು.<br><br>ಮುಂದುವರೆದು, ಲಿಂಗಧೀರನಹಳ್ಳಿ ಬಡಾವಣೆಯ ಸಿ.ಎ.ನಿವೇಶನವನ್ನು ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ರವರು ದಿನಾಂಕ: 22-01-2020 ರಂದು 1ನೇ ಪುಸ್ತಕದ ದಸ್ತಾವೇಜು ನಂ.ಜೆಎವೈ-1-09318-2019-20 ಆಗಿ ಸಿಡಿ ನಂ.ಜೆಎವೈಡಿ-6660ನೇದ್ದರಲ್ಲಿ ಮರುಸ್ಥಿರೀಕರಣ ಪತ್ರ ನೋಂದಾಯಿಸುವ ಮುಖಾಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಿ.ಎ.ನಿವೇಶನವನ್ನು ಹಿಂದಿರುಗಿಸಿರುತ್ತಾರೆ. ಸಿ.ಎ.ನಿವೇಶನದ ಸುತ್ತಲೂ ಚೈನ್ ಲಿಂಕ್ ಫೆನ್ಸಿಂಗ್ ಮಾಡಿ ಪ್ರಾಧಿಕಾರದ ವಶಕ್ಕೆ ಪಡೆಯಲಾಗಿರುತ್ತದೆ. ಸದರಿ ಸಿ.ಎ.ನಿವೇಶನದ ವಿಸ್ತೀರ್ಣ 3834.60 ಚ.ಮೀಟರ್ ಗಳಾಗಿರುತ್ತದೆ.<br><br>ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿಯಲ್ಲಿ 15 ಎಕರೆ ಜಮೀನಿನಲ್ಲಿ ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ರವರಿಗೆ ಹಂಚಿಕೆಯಾಗಿದ್ದ ಬಡಾವಣೆಯಲ್ಲಿ ಸಿ.ಎ ನಿವೇಶನವನ್ನು ಕಬಳಿಸಿರುವ ಬಗ್ಗೆ ಬಿಎಂಟಿಎಫ್ ಪೊಲೀಸ್ ಠಾಣೆಯ ಮೊ.ಸಂ.15/17 ಕಲಂ33(ಎ), 72 ಬಿಡಿಎ ಆಕ್ಟ್ 1976 & 409, 420. ರ/ವಿ 34/ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ 03 ಜನ ಆರೋಪಿತರ ವಿರುದ್ಧ ಮಾನ್ಯ 4ನೇ ಎ.ಸಿ.ಎಂ.ಎಂ.ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ಸಿಸಿ ನಂ.1811/2019 ರಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.<br><br>ನಿವೃತ್ತರಾದ ಅಧಿಕಾರಿ/ನೌಕರರು ಸೇರಿದಂತೆ ಪಿಂಚಣಿ ನಿಲ್ಲಿಸಿರುವುದಿಲ್ಲ.</td>
</tr>
<tr>
<td>(ಇ)</td>
<td>ದೊಡ್ಡಕಲ್ಲಸಂದ್ರ ಗ್ರಾಮದ ಸ.ನಂ.19(ಪಿ) ಮತ್ತು ಲಿಂಗಧೀರನಹಳ್ಳಿ ಗ್ರಾಮದ ಸ.ನಂ.1/4(ಪಿ), 7/5(ಪಿ), 7/6(ಪಿ), 7/8(ಪಿ) ಮತ್ತು 7/9(ಪಿ) ರಲ್ಲಿ ನಿರ್ದಿಷ್ಟವಾಗಿ ಎಷ್ಟೆಷ್ಟು ವಿಸ್ತೀರ್ಣದ ಜಮೀನನ್ನು ನೀಡಲಾಗಿದೆ; ಸದರಿ ಜಮೀನಿನ ಸರ್ವೆ ನಂಬರ್ ವಿಸ್ತೀರ್ಣ ಒಳಗೊಂಡ ನೋಂದಾಯಿತ ಕ್ರಯಪತ್ರಗಳ ಸಂಪೂರ್ಣವಾದ ವಿವರಗಳನ್ನು ನೀಡುವುದು;</td>
<td>ದೊಡ್ಡಕಲ್ಲಸಂದ್ರ ಗ್ರಾಮದ ಸ.ನಂ.19(ಪಿ) ರಲ್ಲಿ ಜಮೀನನ್ನು ಹಂಚಿಕೆ ಮಾಡಿರುವುದಿಲ್ಲ.<br><br>ಲಿಂಗಧೀರನಹಳ್ಳಿ ಬಡಾವಣೆಯಲ್ಲಿ ಹಂಚಿಕೆ ಮಾಡಿರುವ ಜಮೀನಿನ ವಿವರ ಕೆಳಕಂಡಂತಿರುತ್ತದೆ:-
<table>
<tr><th>ಸರ್ವೆ ನಂ.</th><th>ವಿಸ್ತೀರ್ಣ</th><th>ಕ್ರಯಪತ್ರ ದಿನಾಂಕ</th></tr>
<tr><td>06(ಪಿ)</td><td>07 ಎಕರೆ</td><td>13.06.2007</td></tr>
<tr><td>06(ಪಿ), 7(ಪಿ)</td><td>05 ಎಕರೆ</td><td>14.11.2007</td></tr>
<tr><td>06(ಪಿ), 7(ಪಿ)</td><td>03 ಎಕರೆ</td><td>28.06.2011</td></tr>
</table>
ಲಿಂಗಧೀರನಹಳ್ಳಿ ಗ್ರಾಮದಲ್ಲಿ ಒಟ್ಟು 15 ಎಕರೆ ಜಮೀನು ಬಿಡುಗಡೆಯಾಗಿದೆ. ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ರವರ ಪರವಾಗಿ ನೋಂದಣಿಯಾಗಿರುವ ಕ್ರಯಪತ್ರಗಳಲ್ಲಿ ಸರ್ವೆ ನಂಬರ್ 6(ಪಿ) ಮತ್ತು 7(ಪಿ) ಎಂದು ಮಾತ್ರ ನಮೂದಿಸಲಾಗಿದೆ.</td>
</tr>
</table>

..3ಕ್ಕೆ

| | | |
|---|---|---|
| | | ಆದರೆ. ಅಭಿಯಂತರ ವಿಭಾಗದವರು ಕಣ್ತಪ್ಪಿನಿಂದ ಸರ್ವೆ ನಂಬರ್ 1/4, 7/1, 7/5, 7/6, 7/8 ಮತ್ತು 7/9 ಗಳನ್ನು ನಮೂದಿಸದೇ ಕೇವಲ ಸರ್ವೆ ನಂಬರ್ 6(ಪಿ) ಮತ್ತು 7(ಪಿ) ಎಂದು ಖಚಿತ ಅಳತೆ ವರದಿ ನೀಡಿದ್ದರ ಹಿನ್ನೆಲೆಯಲ್ಲಿ ಸರ್ವೆ ನಂಬರ್ 1/4, 7/1, 7/5, 7/6, 7/8. 7/9 ಕ್ರಯಪತ್ರದಲ್ಲಿ ನಮೂದಿಸಿರುವುದಿಲ್ಲ. ಪ್ರಸ್ತುತ ಸರ್ವೆ ನಂಬರ್ 6(ಪಿ) ಮತ್ತು 7(ಪಿ) ಎಂದು ನೋಂದಣಿಯಾಗಿರುವ ಒಟ್ಟು ವಿಸ್ತೀರ್ಣ 15 ಎಕರೆ ಪ್ರದೇಶದಲ್ಲೇ ಸರ್ವೆ ನಂಬರ್ 1/4, 6(ಪಿ), 7/1, 7/5, 7/6, 7/8 ಮತ್ತು 7/9 ಒಳಗೊಂಡಿದ್ದು, ತಿದ್ದುಪಡಿ ಕ್ರಯಪತ್ರ ಪ್ರಾಧಿಕಾರದಿಂದ ನೀಡಬೇಕಿರುತ್ತದೆ. |
| (ಈ) | ಕ್ರಯಪತ್ರದಲ್ಲಿ ವಿಸ್ತೀರ್ಣ ನೋಂದಾಯಿಸದೇ ಯಾವ್ಯಾವ ಜಮೀನುಗಳನ್ನು ಅಕ್ರಮವಾಗಿ ನೀಡಲಾಗಿದೆ; ಈ ಅಕ್ರಮದಲ್ಲಿ ಕಾರಣರಾದವರ ವಿರುದ್ಧ ಕೈಗೊಂಡ ಕ್ರಮಗಳನ್ನು ಲಿಖಿತ ದಾಖಲೆಗಳೊಡನೆ ನೀಡುವುದು; | ಕ್ರಯಪತ್ರದಲ್ಲಿ ವಿಸ್ತೀರ್ಣ ನೋಂದಾಯಿಸದೇ ಯಾವುದೇ ಜಮೀನುಗಳನ್ನು ಹಂಚಿಕೆ ಮಾಡಿರುವುದಿಲ್ಲ. |
| (ಉ) | ಪ್ರಾಧಿಕಾರದ ವಿಚಕ್ಷಣ ದಳದವರು ಲಿಂಗಧೀರನಹಳ್ಳಿಯ ನಿವೇಶನ ಹಂಚಿಕೆಯಲ್ಲಿನ ಅಕ್ರಮಗಳ ಬಗ್ಗೆ ವರದಿ ಸಲ್ಲಿಸಿದ್ದು. ವರದಿಯಂತೆ ಕೈಗೊಂಡ ಕ್ರಮಗಳೇನು; ದೊಡ್ಡಕಲ್ಲಸಂದ್ರ ಗ್ರಾಮದ ನಿವೇಶನ ಹಂಚಿಕೆ ಅಕ್ರಮದ ತನಿಖೆ ಯಾವ ದಿನಾಂಕದಿಂದ ನಡೆಯುತ್ತಿದೆ; ಯಾವಾಗ ಪೂರ್ಣಗೊಳ್ಳುವುದು; ಅಕ್ರಮಗಳ ಬಗ್ಗೆ ಸಲ್ಲಿಸಿರುವ ದಾಖಲೆಗಳನ್ನು ನೀಡುವುದು; | ದೊಡ್ಡಕಲ್ಲಸಂದ್ರ ಗ್ರಾಮದಲ್ಲಿ ಪ್ರಾಧಿಕಾರದ ಸಿ ಮತ್ತು ಡಿ ಗುಂಪಿನ ನೌಕರರಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಮಂಜೂರು ಮಾಡಿಸಿಕೊಂಡಿದ್ದ ಜಮೀನಿನಲ್ಲಿ ಬಿಡಿಎ ನೌಕರರು, ನಿವೃತ್ತ ನೌಕರರಿಂದ ಹಣ ಪಡೆದು ಹಂಚಿಕೆ ಮಾಡದೇ ಇತರೆ ಇಲಾಖೆಯ ನೌಕರರಿಗೆ, ಎರವಲು ಸೇವೆಯ ನೌಕರರಿಗೆ ಮತ್ತು ಸಾರ್ವಜನಿಕರಿಗೆ ಹಂಚಿಕೆ ಮಾಡಿ ಅಕ್ರಮವೆಸಗಿದ್ದ ಬಗ್ಗೆ ಶೇಷಾದ್ರಿಪುರಂ ಪೊಲೀಸ್ ಠಾಣೆಯ ಮೊ.ಸಂ.69/2016 ಕಲಂ 406, 420, ರೆ/ವಿ 34, ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ ಇಬ್ಬರು ಆರೋಪಿತರ ವಿರುದ್ಧ ಮಾನ್ಯ 8ನೇ ಎ.ಸಿ.ಎಂ.ಎಂ.ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ಸಿಸಿ ನಂ.3681/2018 ರಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.<br><br>ಪ್ರಾಧಿಕಾರದ ವಿಚಕ್ಷಣ ದಳದವರು ವಿಚಾರಣೆ ನಡೆಸಿ ಸಲ್ಲಿಸಿರುವ ವರದಿಯ ಪ್ರತಿಯನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| (ಊ) | ಎ.ಸಿ.ಬಿ. ರವರು ಸಂಘದ ಅಕ್ರಮಗಳ ಬಗ್ಗೆ ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿರುವುದು ನಿಜವೇ; ಯಾವ ದಿನಾಂಕದಂದು ಮಾಡಲಾಗಿದೆ? (ಶಿಫಾರಸ್ಸಿನ ಪ್ರತಿ ಹಾಗೂ ಕೈಗೊಂಡ ಕ್ರಮಗಳ ವಿವರ ನೀಡುವುದು) | ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸಿಬಿಯಲ್ಲಿ ಶ್ರೀ ಚಿಕ್ಕಯ್ಯ ಮತ್ತು ಇತರರು ದೂರು ದಾಖಲಿಸಿದ್ದು, ಸಂಘದ ಅಕ್ರಮಗಳ ಬಗ್ಗೆ ಕ್ರಮಕೈಗೊಳ್ಳಲು ಪಿಟಿಷನ್ ಸಂಖ್ಯೆ:143/21-22 ದಿನಾಂಕ:30.07.2021 ರಂದು ತನಿಖೆ ನಡೆಸಲು ಪೂರ್ವಾನುಮತಿ ನೀಡುವ ಕುರಿತು ಪ್ರಾಧಿಕಾರವನ್ನು ಕೋರಲಾಗಿದೆ. |

**ನಅಇ 210 ಬೆಂಆಸೇ 2021**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿಗಳು

ಅನುಬಂಧ - 1

ANNEXURE - 9

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

BDA ಎಂಪ್ಲಾಯೀಸ್ ವೆಲ್‌ಫೇರ್ ಅಸೋ

ಟಿಪ್ಪಣಿ ಹಾಳೆಯ ಪುಟ ಸಂಖ್ಯೆ: — 01 — ಕಡತದ ಸಂಖ್ಯೆ: ಲಿಂಗಧೀರನ ಹಳ್ಳಿ

ವಿಷಯ: ಪ್ರಾಥಮಿಕ ವಿಚಾರಣಾ ವರದಿ

| ಕಂಡಿಕೆ ಸಂಖ್ಯೆ | ಟಿಪ್ಪಣಿ ಮತ್ತು ಆಜ್ಞೆ |
|---|---|

000001

## ಎಸ್.ಪಿ.ಜಿ ಸಂಖ್ಯೆ 15/2016-17

## ಪ್ರಾಥಮಿಕ ವಿಚಾರಣಾ ವರದಿ

01) ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂಬರ್ 15(ಪಿ), 16(ಪಿ), 17(ಪಿ) & 19(ಪಿ) ರಲ್ಲಿನ ಒಟ್ಟು 27 ಎಕರೆ 15.08 ಗುಂಟೆ ಜಮೀನಿಗೆ ಹಾಗೂ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ ¼(ಪಿ) 6(ಪಿ), 7/1(ಪಿ), 7/5(ಪಿ), 7/6(ಪಿ), 7/8(ಪಿ) & 7/9(ಪಿ) ರಲ್ಲಿನ 15 ಎಕರೆ ಜಮೀನಿಗೆ, ಕ್ರಮವಾಗಿ ಪ್ರಾಧಿಕಾರದ ಠರಾವು ಸಂಖ್ಯೆ 29/2011, ದಿನಾಂಕ;28-02-2011 ಹಾಗೂ ಠರಾವು ಸಂಖ್ಯೆ 172/2012, ದಿನಾಂಕ;17-11-2012 ರ ತೀರ್ಮಾನಗಳಂತೆ ಮಾರ್ಪಡಿತ ವಸತಿ ಬಡಾವಣೆ ನಕ್ಷೆಯನ್ನು ಬಿ.ಡಿ.ಎ ಎಂಪ್ಲಾಯೀಸ್ ವೆಲ್ ಫೇರ್ ಅಸೋಸಿಯೇಷನ್(ರಿ) ಸಂಘದ ಪರವಾಗಿ ಅನುಮೋದನೆ ನೀಡಿದ್ದು, ಸದರಿ ಸಂಘದ ವಿರುದ್ಧ ಶ್ರೀ.ಚಿಕ್ಕಯ್ಯ, ಶ್ರೀ.ಟಿ.ಜೆ.ಅಬ್ರಾಹಂ ಹಾಗೂ ಇತರರು ನೀಡಿರುವ ದೂರು ಅರ್ಜಿಯನ್ನು ಈ ವಿಭಾಗದಲ್ಲಿ ಎಸ್.ಪಿ.ಜಿ ಸಂಖ್ಯೆ 15/16-17 ರಂತೆ ದಾಖಲು ಮಾಡಿಕೊಂಡು ವಿಚಾರಣೆಯನ್ನು ಕೈಗೊಂಡಿರುವುದು ಸರಿಯಷ್ಟೆ.

02) ಬಿ.ಡಿ.ಎ ಎಂಪ್ಲಾಯೀಸ್ ವೆಲ್ ಫೇರ್ ಅಸೋಸಿಯೇಷನ್(ರಿ) ಸಂಘದ ಪರವಾಗಿ ಪ್ರಾಧಿಕಾರದಿಂದ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ದೊಡ್ಡಕಲ್ಲಸಂದ್ರ ಗ್ರಾಮ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮಗಳಲ್ಲಿ ವಸತಿ ಬಡಾವಣೆ ನಕ್ಷೆಗಳನ್ನು ಮಂಜೂರು ಮಾಡಿದ್ದು, ಈ ಎರಡು ಗ್ರಾಮಗಳ ಪೈಕಿ, ಈಗ ಹಾಲಿ ಸದ್ಯಕ್ಕೆ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮಕ್ಕೆ ಸಂಬಂಧಿಸಿದಂತೆ ಮಾತ್ರ ವಿಚಾರಣೆಯನ್ನು ಮಾಡಿ ಈ ಕೆಳಕಂಡಂತೆ ಪ್ರಾಥಮಿಕ ವಿಚಾರಣಾ ವರದಿಯನ್ನು ಮಂಡಿಸಿರುತ್ತದೆ.

03) 1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಿ.ಡಿ.ಎ ನೌಕರರ ಸಂಘದವರು, ನೌಕರರಿಗೆ ನಿಯಮಗಳನ್ನು ಸಡಿಲಿಸಿ ನಿವೇಶನಗಳನ್ನು ಹಂಚಿಕೆ ಮಾಡುವಂತೆ 1996 ರಿಂದಲೂ ಪ್ರಾಧಿಕಾರಕ್ಕೆ ಮನವಿಗಳನ್ನು ಸಲ್ಲಿಸುತ್ತಾ ಬಂದಿದ್ದು, ಸುವರ್ಣ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಬೆಸ್ಕಾಂ, ಬಿ.ಡಬ್ಲ್ಯೂಎಸ್.ಎಸ್.ಬಿ ಹಾಗೂ ಇತರೆ ನೌಕರರಿಗೆ ವಿಶೇಷ ಸವಲತ್ತು ನೀಡಿರುವುದರಿಂದ, ತಮ್ಮ ನೌಕರರಿಗೂ ಸಹ ನಿವೇಶನಗಳನ್ನು ಹಂಚಿಕೆ ಮಾಡುವ ಸಲುವಾಗಿ 45 ಎಕರೆ ಭೂಮಿಯನ್ನು ಸಗಟಾಗಿ ಹಂಚಿಕೆ ಮಾಡುವಂತೆ ಸಂಘವು ಪ್ರಾಧಿಕಾರವನ್ನು ಕೋರಿದ್ದು, ಪ್ರಾಧಿಕಾರವು 45 ಎಕರೆ ಜಮೀನನ್ನು ಸಗಟಾಗಿ ಹಂಚಿಕೆ ಮಾಡಿ, ಜಮೀನಿನಲ್ಲಿ ನಿವೇಶನಗಳನ್ನು ರಚಿಸಿ ನೌಕರರಿಗೆ ಹಂಚಿಕೆ ಮಾಡುವ ಸಲುವಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದು, ಪ್ರಾಧಿಕಾರದ ಪ್ರಸ್ತಾವನೆಯನ್ನು ಸರ್ಕಾರವು ತನ್ನ ಆದೇಶ ಸಂಖ್ಯೆ:ನಅಇ/40/ಬೆಂಆಸೇ/2006, ದಿನಾಂಕ;19-04-2006 ರಲ್ಲಿ ತಾತ್ವಿಕ ಅನುಮೋದನೆಯನ್ನು ನೀಡಿರುತ್ತದೆ.

04) 2) ಸರ್ಕಾರದ ಆದೇಶದಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಜೆ.ಪಿ ನಗರ 9ನೇ ಹಂತ ಬಡಾವಣೆಯನ್ನು ರಚಿಸುವ ಸಲುವಾಗಿ ಭೂಸ್ವಾಧೀನಪಡಿಸಿಕೊಂಡಿದ್ದ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂಬರ್ 15, 16 & 17 ರಲ್ಲಿ ಒಟ್ಟು 33 ಎಕರೆ 02 ಗುಂಟೆ ಜಮೀನನ್ನು ಬಿ.ಡಿ.ಎ ನೌಕರರ ಸಂಘದ ಪರವಾಗಿ ದಿನಾಂಕ;01-09-2006 ರಂದು ಸಗಟು ಹಂಚಿಕೆ ಮಾಡಿದ್ದು, ಅದರಂತೆ ಪ್ರಾಧಿಕಾರದ ಠರಾವು ಸಂಖ್ಯೆ 81/2007, ದಿನಾಂಕ;05-01-2007 ರ ತೀರ್ಮಾನದಂತೆ, ಬಿ.ಡಿ.ಎ ಎಂಪ್ಲಾಯೀಸ್ ವೆಲ್ ಫೇರ್ ಅಸೋಸಿಯೇಷನ್(ರಿ) ಸಂಘದ ಪರವಾಗಿ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡಲಾಗಿರುತ್ತದೆ.

ಹೆಚ್ಚಿನ ಜಾಗ

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

BDA ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ)

ಟಿಪ್ಪಣಿ ಹಾಳೆಯ ಪುಟ ಸಂಖ್ಯೆ : —02—  ಕಡತದ ಸಂಖ್ಯೆ: ಲಿಂಗಧೀರನಹಳ್ಳಿ

ವಿಷಯ:

| ಕಂಡಿಕೆ ಸಂಖ್ಯೆ | 000002 ಟಿಪ್ಪಣಿ ಮತ್ತು ಆಜ್ಞೆ |
|---|---|

05) 3) ದಿನಾಂಕ;04-04-2007 ರಂದು ಬಿ.ಡಿ.ಎ ಎಂಪ್ಲಾಯೀಸ್ ವೆಲ್ ಫೇರ್ ಅಸೋಸಿಯೇಷನ್(ರಿ) ಸಂಘದ ಅಧ್ಯಕ್ಷರು ಪ್ರಾಧಿಕಾರದ ಮಾನ್ಯ ಆಯುಕ್ತರವರಿಗೆ ಮನವಿಯನ್ನು ಸಲ್ಲಿಸಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 06 ರಲ್ಲಿನ ಜಮೀನನ್ನು ಪ್ರಾಧಿಕಾರವು ಬನಶಂಕರಿ 6ನೇ ಹಂತ ಬಡಾವಣೆಗಾಗಿ ಭೂಸ್ವಾಧೀನಪಡಿಸಿಕೊಂಡಿದ್ದು, ಸದರಿ ಜಮೀನಿನಲ್ಲಿ ಲಭ್ಯವಿರುವ ಜಮೀನನ್ನು ಸಂಘಕ್ಕೆ ಮಂಜೂರು ಮಾಡುವಂತೆ ಕೋರಿದ್ದು, ಅದರಂತೆ ಪ್ರಾಧಿಕಾರದ ಉಪ ಕಾರ್ಯದರ್ಶಿ-1 ರವರು ದಿನಾಂಕ;08-06-2007 ರಂದು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ರಲ್ಲಿ 07 ಎಕರೆ ಜಮೀನನ್ನು ಸಂಘದವರಿಗೆ ಮಂಜೂರು ಮಾಡಿದ್ದು, ಅದರಂತೆ ಪ್ರಾಧಿಕಾರವು ಜಮೀನಿಗೆ ಸಂಬಂಧಿಸಿದಂತೆ ನಿಗದಿಪಡಿಸಿರುವ ಮೌಲ್ಯವನ್ನು ಸಂಘವದರು ಪ್ರಾಧಿಕಾರಕ್ಕೆ ಸಂದಾಯ ಮಾಡಿರುತ್ತಾರೆ. ಸದರಿ 07 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪ್ರಾಧಿಕಾರದ ಸಂಬಂಧಪಟ್ಟ ದಕ್ಷಿಣ ವಿಭಾಗದ ಅಭಿಯಂತರರು ಖಚಿತ ಅಳತೆ ವರದಿಯನ್ನು ನೀಡಿದ್ದು, ನಂತರ ಸದರಿ ಜಮೀನನ್ನು ಮೇಲ್ಕಂಡ ಸಂಘದವರ ಹೆಸರಿಗೆ ದಿನಾಂಕ;13-06-2007 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಲಾಗಿರುತ್ತದೆ ಹಾಗೂ ಅದೇ ದಿನ ಸ್ವಾಧೀನ ಪತ್ರವನ್ನು ನೀಡಲಾಗಿರುತ್ತದೆ. ಸದರಿ 07 ಎಕರೆ ಜಮೀನಿಗೆ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡುವಂತೆ ಸಂಘದ ಅಧ್ಯಕ್ಷರು ದಿನಾಂಕ;26-07-2007 ರಂದು ನಗರ ಯೋಜನಾ ವಿಭಾಗಕ್ಕೆ ನಿಗಧಿತ ನಮೂನೆಯಲ್ಲಿ ಮಾಹಿತಿಗಳನ್ನು ಭರ್ತಿ ಮಾಡಿ ಜಮೀನಿಗೆ ಸಂಬಂಧಿಸಿದ ದಾಖಲಾತಿಗಳೊಂದಿಗೆ ಕರಡು ನಕ್ಷೆಯನ್ನು ಸಲ್ಲಿಸಿದ್ದು, ಸಂಘದವರು ಸಲ್ಲಿಸಿರುವ ಕರಡು ನಕ್ಷೆಯಲ್ಲಿ 07 ಎಕರೆ ಪ್ರದೇಶಕ್ಕೆ ಪೂರ್ತಿಯಾಗಿ ವಸತಿ ನಿವೇಶನಗಳನ್ನು ಸೂಚಿಸಿರುವುದು ಕಂಡುಬಂದಿದ್ದರಿಂದ, ಇದರ ಬಗ್ಗೆ ನಗರ ಯೋಜನಾ ವಿಭಾಗದವರು ಖಾಸಗಿ ಬಡಾವಣೆಗಳನ್ನು ಅನುಮೋದಿಸುವಾಗ ಕೈಗೊಳ್ಳುವ ಕ್ರಮಗಳಂತೆ, ಈ ಸಂಘಕ್ಕೂ ಸಹ ಕ್ರಮಕೈಗೊಳ್ಳಬೇಕಾಗಿದ್ದು, 07 ಎಕರೆ ಪ್ರದೇಶಕ್ಕೆ ವಲಯ ನಿಯಮಾವಳಿಗಳನ್ವಯ ಬಿಡಬೇಕಾದ 15% ರಷ್ಟು ಪ್ರದೇಶವನ್ನು ಉದ್ಯಾನವನ/ಬಯಲುಜಾಗ /ಸಿಎ ಗಳನ್ನು ಸಂಘದವರು ಸಲ್ಲಿಸಿರುವ ಕರಡು ನಕ್ಷೆಯಲ್ಲಿ ಸೂಚಿಸದೇ ಇರುವುದರಿಂದ, ಕರಡು ನಕ್ಷೆಯ ಪಶ್ಚಿಮ ಮತ್ತು ಉತ್ತರ ಭಾಗದಲ್ಲಿ ಪ್ರಾಧಿಕಾರಕ್ಕೆ ಸೇರಿದ ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 06 & 07 ರಲ್ಲಿನ ಜಮೀನುಗಳು ಲಭ್ಯವಿದ್ದು, ಸಂಘದವರಿಗೆ ಬಾಕಿ ನೀಡಬೇಕಾಗಿರುವ ಜಮೀನಿನ ಪೈಕಿ, ಸರ್ವೆ ನಂಬರ್ 06&07 ರಲ್ಲಿ ಲಭ್ಯವಿರುವ ಜಮೀನನ್ನು ನೀಡಿ, ಒಟ್ಟು ಪ್ರದೇಶಕ್ಕೆ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡಬಹುದೆಂದು ಕಂಡಿಕೆ 29 ರಲ್ಲಿ ನಗರ ಯೋಜನಾ ಸದಸ್ಯರು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದು ಅದರಂತೆ ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ರಲ್ಲಿ 01 ಎಕರೆ 38 ಗುಂಟೆ ಮತ್ತು 7(ಪಿ) ರಲ್ಲಿ 03 ಎಕರೆ 02 ಗುಂಟೆ ಜಮೀನನ್ನು ಒಟ್ಟು 05 ಎಕರೆ ಜಮೀನನ್ನುಸಹ ಮೇಲ್ಕಂಡ ಸಂಘವದರು ಪ್ರಾಧಿಕಾರದಿಂದ ದಿನಾಂಕ;14-11-2007 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿ ಮಾಡಿ ಅದೇ ದಿನ ಸ್ವಾಧೀನ ಪತ್ರವನ್ನು ಸಹ ಪಡೆದುಕೊಂಡಿದ್ದು, ಈ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ದಕ್ಷಿಣ ವಿಭಾಗದ ಅಭಿಯಂತರರು ಖಚಿತ ಅಳತೆ ವರದಿಯನ್ನು ಸಹ ನೀಡಿರುತ್ತಾರೆ. ಹೀಗೆ ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ಮತ್ತು 7(ಪಿ) ರಲ್ಲಿ ಒಟ್ಟು 12 ಎಕರೆ ಜಮೀನಿಗೆ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡುವಂತೆ ಕರಡು ನಕ್ಷೆಯೊಂದಿಗೆ ಸಂಘದವರು ಕೋರಿದ್ದು, ಈ ವಿಷಯವನ್ನು ಪ್ರಾಧಿಕಾರದ ಠರಾವು ಸಂಖ್ಯೆ 288/2007, ದಿ;21-11-2007 ರಲ್ಲಿ ಚರ್ಚಿಸಿ, ಮೇಲ್ಕಂಡ ಸಂಘದವರ ಪರವಾಗಿ ವಸತಿ ಬಡಾವಣೆ ನಕ್ಷೆಯನ್ನು ಅನುಮೋದಿಸಲಾಗಿರುತ್ತದೆ. ಅನುಮೋದಿತಾ ವಸತಿ ಬಡಾವಣೆಯಲ್ಲಿ ನಿಬಂಧನೆಗಳಂತೆ ಮೇಲ್ಕಂಡ ಸಂಘದವರು ಸ್ಥಳದಲ್ಲಿ ಬಡಾವಣೆಯನ್ನು ರಚಿಸಿ, ವಲಯ

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆದ ಪುಟ ಸಂಖ್ಯೆ : 03 ಕಡತದ ಸಂಖ್ಯೆ: [illegible]

ವಿಷಯ: BDA [illegible]

| ಕಂಡಿಕೆ ಸಂಖ್ಯೆ | ಟಿಪ್ಪಣಿ ಮತ್ತು ಆಜ್ಞೆ 000003 |
|---|---|
| | ನಿಯಮಾವಳಿಯಂತೆ ಉದ್ಯಾನವನ, ಸಿ.ಎ ನಿವೇಶನ ಮತ್ತು ರಸ್ತೆಗೆ ಮೀಸಲಿಟ್ಟಿರುವ ಪ್ರದೇಶವನ್ನು ದಿನಾಂಕ;10-01-2008 ರಂದು ನೋಂದಾಯಿತ ಪರಿತ್ಯಾಜನಪತ್ರದ ಮೂಲಕ ಪ್ರಾಧಿಕಾರದ ದಕ್ಷಿಣ ವಿಭಾಗದ ಅಭಿಯಂತರರ ವಿಭಾಗಕ್ಕೆ ಹಸ್ತಾಂತರ ಮಾಡಿದ್ದು, ನಂತರ ಪ್ರಾಧಿಕಾರದಿಂದ ಮೇಲ್ಕಂಡ ಸಂಘದವರ ಪರವಾಗಿ ದಿನಾಂಕ;27-08-2008 ರಂದು ಕಾರ್ಯಾದೇಶ ಪತ್ರವನ್ನು ನೀಡಲಾಗಿರುತ್ತದೆ. |
| 06) | 4) ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ಮತ್ತು 7(ಪಿ) ರಲ್ಲಿ ಒಟ್ಟು 12 ಎಕರೆ ಜಮೀನಿಗೆ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡಿ, ಮೇಲ್ಕಂಡ ಸಂಘದವರ ಪರವಾಗಿ ದಿನಾಂಕ;27-08-2008 ರಂದು ಕಾರ್ಯಾದೇಶ ಪತ್ರವನ್ನು ನೀಡಲಾಗಿದ್ದು, ನಂತರ ಅನುಮೋದಿತ ವಸತಿ ಬಡಾವಣೆ ನಕ್ಷೆಯಂತೆ ಈ ಬಡಾವಣೆಯಲ್ಲಿ ಒಟ್ಟು 239 ನಿವೇಶನಗಳನ್ನು ಸೂಚಿಸಿದ್ದು, ಸರ್ಕಾರದ ಆದೇಶ ಸಂಖ್ಯೆ;ನಅಇ 112 ಬೆಂರೂಪ್ರಾ;2005(ಬಾ), ದಿನಾಂಕ;26-05-2005 ರನ್ವಯ ಶೇಕಡ 60 ರಷ್ಟು ವಸತಿ ನಿವೇಶನಗಳನ್ನು ಬಿಡುಗಡೆ ಮಾಡಬೇಕಾಗಿದ್ದು, ಅದರಂತೆ ನಗರ ಯೋಜನಾ ವಿಭಾಗದ ಸಂಖ್ಯೆ; ಬೆಂಅಪ್ರಾ/ನಯೋಸ/ಪಿಎಲ್-22/378/2007-08, ದಿನಾಂಕ;27-08-2008 ರ ತೀರ್ಮಾನದಂತೆ, ನಿವೇಶನಗಳ ಬಿಡುಗಡೆ ಹಿಂಬರಹದಲ್ಲಿ 2, 3, 4, 6, 8, 9, 10, 12, 14, 16, 18, 19, 20, 47, 48, 49, 51, 53, 55, 57, 59, 61, 63, 64, 67, 68, 69, 70, 71, 73, 75, 77, 79, 80, 81, 83, 84, 85, 87, 89, 91, 93, 94, 97, 98, 99, 101, 103, 104, 105, 107, 109, 111, 112, 113, 115, 117, 119, 121, 122, 123, 126, 127, 128, 130, 132, 134, 135, 136, 138, 140, 141, 143, 145, 147, 149, 150, 153, 154, 155, 157, 159, 161, 163, 165, 166, 167, 169, 171, 173, 174, 175, 176, 179, 180, 181, 183, 185, 187, 189, 191, 193, 195, 197, 198, 199, 202, 203, 204, 206, 208, 210, 212, 214, 216, 218, 219, 220, 221, 224, 225, 226, 228, 230, 232, 234, 236, 238, 240, 241, 242, 245, 246, 247, 249, 251, 253, 255, 257, 259, 260, 261 & 262 ಹೀಗೆ ಒಟ್ಟು 143 ನಿವೇಶನಗಳನ್ನು ಬಿಡುಗಡೆ ಮಾಡಲು ಹಾಗೂ ಬಡಾವಣೆಯನ್ನುಪರಿಪೂರ್ಣವಾಗಿ ಅಭಿವೃದ್ಧಿ ಪಡಿಸಿದ ನಂತರ ಬಿಡುಗಡೆ ಮಾಡಬೇಕಾಗಿರುವ ಶೇಕಡ 40 ರಷ್ಟು ನಿವೇಶನಗಳು ಈ ರೀತಿ ಇರುತ್ತದೆ. ನಿವೇಶನ ಸಂಖ್ಯೆ 1, 5, 7, 11, 13, 15, 17, 21, 46, 50, 52, 54, 56, 58, 60, 62, 65, 66, 72, 74, 76, 78, 82, 86, 88, 90, 92, 95, 96, 100, 102, 106, 108, 110, 114, 116, 118, 120, 124, 125, 129, 131, 133, 137, 139, 142, 144, 146, 148, 151, 152, 156, 158, 160, 162, 164, 168, 170, 172, 177, 178, 182, 184, 186, 188, 190, 192, 194, 196, 200, 201, 205, 207, 209, 211, 213, 215, 217, 222, 223, 227, 229, 231, 233, 235, 237, 239, 243, 244, 248, 250, 252, 254, 256, 258 & 263 ಹೀಗೆ ಒಟ್ಟು 96 ನಿವೇಶನಗಳು. |
| 07) | 5) ದಿನಾಂಕ;15-02-2011 ರಂದು ಮೇಲ್ಕಂಡ ಸಂಘದವರು ಪ್ರಾಧಿಕಾರದ ಮಾನ್ಯ ಆಯುಕ್ತರವರಿಗೆ ಮನವಿಯನ್ನು ಸಲ್ಲಿಸಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ಮತ್ತು 7(ಪಿ) ರಲ್ಲಿ ಲಭ್ಯವಿರುವ 03 ಎಕರೆ ಜಮೀನನ್ನು ಮಂಜೂರು ಮಾಡುವಂತೆ ಕೋರಿದ್ದು, ಅದರಂತೆ ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ಮತ್ತು 7(ಪಿ) ರಲ್ಲಿ ಲಭ್ಯವಿರುವ 03 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪ್ರಾಧಿಕಾರದ ದಕ್ಷಿಣ ವಿಭಾಗದ ಸಂಬಂಧಪಟ್ಟ ಅಭಿಯಂತರರು ಖಚಿತ ಅಳತೆ ವರದಿಯನ್ನು ನೀಡಿದ್ದು, ಈ ವರದಿಯ ಆಧಾರದ ಮೇಲೆ ಪ್ರಾಧಿಕಾರದಿಂದ ದಿನಾಂಕ;28-06-2011 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಸಂಘವರಿಗೆ ಮಾರಾಟ ಮಾಡಿದ್ದು, ಆದೇ ದಿನ ಸ್ವಾಧೀನ ಪತ್ರವನ್ನು ಸಹ |

ಹೊಲಿಗೆ ಭಾಗ

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆಯ ಪುಟ ಸಂಖ್ಯೆ : 04 ಕಡತದ ಸಂಖ್ಯೆ: ಲಿಂಗಧೀರನಹಳ್ಳಿ // [illegible]

ವಿಷಯ: BDA [illegible]

| ಕಂಡಿಕೆ ಸಂಖ್ಯೆ | 000004 ಟಿಪ್ಪಣಿ ಮತ್ತು ಆಜ್ಞೆ |
|---|---|
| | ನೀಡಲಾಗಿರುತ್ತದೆ. ಈ 03 ಎಕರೆ ಜಮೀನಿನಲ್ಲಿ ಸಂಘದವರು ನಿವೇಶನಗಳನ್ನು ರಚಿಸಿ, ಸಂಘದ ಸದಸ್ಯರುಗಳಿಗೆ ಹಂಚಿಕೆ ಮಾಡಿದ್ದು, ಅನುಮೋದಿತಾ ಬಡಾವಣೆ ನಕ್ಷೆಯಲ್ಲಿ ಈ ನಿವೇಶನಗಳನ್ನು ಸೂಚಿಸದೇ ಇರುವುದರಿಂದ, ಸದರಿ ನಿವೇಶನಗಳಿಗೆ ಖಾತಾಪತ್ರವನ್ನು ನೋಂದಣಿ ಮಾಡಲು ಹಾಗೂ ಕಂದಾಯವನ್ನು ಕಟ್ಟಿಸಿಕೊಳ್ಳಲು ಸಾಧ್ಯವಾಗದೇ ಇರುದ್ದರಿಂದ, ಇದರ ಬಗ್ಗೆ ಸಂಘದವರು ದಿನಾಂಕ;04-10-2012 ರಂದು ಮಾನ್ಯ ಆಯುಕ್ತರವರಿಗೆ ಮನವಿಯನ್ನು ಸಲ್ಲಿಸಿ, ಮಾರ್ಪಡಿತ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡುವಂತೆ ಹಾಗೂ ಇನ್ನೂ ಬಿಡುಗಡೆ ಹೊಂದದೇ ಇರುವ ನಿವೇಶನಗಳನ್ನು ಬಿಡುಗಡೆ ಗೊಳಿಸಬೇಕೆಂದು ಕೋರಿದ್ದು, ಸಂಘದವರು ಕೋರುತ್ತಿರುವ ಮಾರ್ಪಡಿತ ವಸತಿ ಬಡಾವಣೆ ನಕ್ಷೆಯ ಕರಡು ನಕ್ಷೆಯಲ್ಲಿನ ವಿಸ್ತೀರ್ಣ ಮತ್ತು ಚೆಕ್ಕುಬಂಧಿಗಳನ್ನು ಗುರ್ತಿಸಿಕೊಡುವಂತೆ ಭೂಸ್ವಾಧೀನ ವಿಭಾಗದವರನ್ನು ಕೋರಿದ್ದು, ಅದರಂತೆ ಭೂಸ್ವಾಧೀನ ವಿಭಾಗದ ಭೂಮಾಪಕರು ಸಂಘದವರಿಗೆ ಹಂಚಿಕೆಯಾಗಿರುವ ಒಟ್ಟು 15 ಎಕರೆ ಪ್ರದೇಶದಲ್ಲಿ ನಕ್ಷೆಯನ್ನು ತಯಾರಿಸಿ ವರದಿಯನ್ನು ನೀಡಿದ್ದು, ಈ ವರದಿಯಲ್ಲಿ ಸಂಘದವರಿಗೆ ಹಂಚಿಕೆಯಾಗಿರುವ 15 ಎಕರೆ ಜಮೀನುಗಳು ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ ¼(ಪಿ) 6(ಪಿ), 7/1(ಪಿ), 7/5(ಪಿ), 7/6(ಪಿ), 7/8(ಪಿ) & 7/9(ಪಿ) ರಲ್ಲಿ ಬರುವುದಾಗಿ ತಿಳಿಸಿರುತ್ತಾರೆ. |
| 08) | 6) ಭೂಸ್ವಾಧೀನ ವಿಭಾಗದ ಭೂಮಾಪಕರು ನೀಡಿರುವ ನಕ್ಷೆ ಮತ್ತು ವರದಿಯಂತೆ ಹಾಗೂ ಸಂಘದವರು ಸಲ್ಲಿಸಿರುವ ಕರಡು ನಕ್ಷೆಯಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ ¼(ಪಿ) 6(ಪಿ), 7/1(ಪಿ), 7/5(ಪಿ), 7/6(ಪಿ), 7/8(ಪಿ) & 7/9(ಪಿ) ರಲ್ಲಿನ ಒಟ್ಟು 15 ಎಕರೆ ಜಮೀನಿಗೆ ದಿನಾಂಕ;17-11-2012 ರಂದು ಠರಾವು ಸಂಖ್ಯೆ 172/2012 ರ ಸಭೆಯಲ್ಲಿ ಚರ್ಚಿಸಿ, ಮೇಲ್ಕಂಡ ಸಂಘದವರ ಪರವಾಗಿ ಮಾರ್ಪಡಿತ ವಸತಿ ಬಡಾವಣೆ ನಕ್ಷೆಗೆ ಅನುಮೋದನೆಯನ್ನು ನೀಡಲಾಗಿರುತ್ತದೆ. ಅದರಂತೆ ಸ್ಥಳದಲ್ಲಿ ಬಡಾವಣೆಯನ್ನು ರಚಿಸಿ, ವಲಯ ನಿಯಮಾವಳಿಯಂತೆ ಉದ್ಯಾನವನ, ಸಿ.ಎ ನಿವೇಶನ ಮತ್ತು ರಸ್ತೆಗೆ ಮೀಸಲಿಟ್ಟಿರುವ ಪ್ರದೇಶವನ್ನು ಮೇಲ್ಕಂಡ ಸಂಘದವರು ದಿನಾಂಕ;30-01-2013 ರಂದು ನೋಂದಾಯಿತ ತಿದ್ದುಪಡಿ ಪರಿತ್ಯಾಜನ ಪತ್ರದ ಮೂಲಕ ಪ್ರಾಧಿಕಾರದ ದಕ್ಷಿಣ ವಿಭಾಗದ ಅಭಿಯಂತರರ ವಿಭಾಗಕ್ಕೆ ಹಸ್ತಾಂತರ ಮಾಡಿದ್ದು, ದಿನಾಂಕ;16-02-2013 ರಂದು ಮೇಲ್ಕಂಡ ಸಂಘದ ಪರವಾಗಿ ಮಾರ್ಪಡಿತ ಕಾರ್ಯಾದೇಶ ಪತ್ರವನ್ನು ನೀಡಲಾಗಿರುತ್ತದೆ. |
| 09) | 7) ಅನುಮೋದಿತ ಮಾರ್ಪಡಿತ ವಸತಿ ಬಡಾವಣೆ ನಕ್ಷೆಯಂತೆ,ಮೇಲ್ಕಂಡ ಬಡಾವಣೆಯಲ್ಲಿ ವಿವಿಧ ಅಳತೆಯ ಅಂದರೆ 9.14×12.19 ಮೀಟರ್ ಉದ್ದಳತೆಯ 221 ನಿವೇಶನಗಳು, 9.14×10.6 ಮೀಟರ್ ಉದ್ದಳತೆಯ 32 ನಿವೇಶನಗಳು, 9.14×9.14 ಮೀಟರ್ ಉದ್ದಳತೆಯ 08 ನಿವೇಶನಗಳು, 6.1×9.14 ಮೀಟರ್ ಉದ್ದಳತೆಯ 39 ನಿವೇಶನಗಳು, 9.14×6.1 ಮೀಟರ್ ಉದ್ದಳತೆಯ 10 ನಿವೇಶನಗಳು ಮತ್ತು ಬೆಸ ಅಳತೆಯ 11 ನಿವೇಶನಗಳು ಸೇರಿದಂತೆ, ಒಟ್ಟು 321 ನಿವೇಶನಗಳು, ಬಡಾವಣೆಯಲ್ಲಿ 9.14 ಮೀಟರ್ ಅಳತೆ ಒಟ್ಟು 05 ರಸ್ತೆಗಳನ್ನು ಮತ್ತು 12.19 ಮೀಟರ್ ಅಳತೆ ಒಂದು ರಸ್ತೆಯನ್ನು ಹಾಗೂ ಉದ್ಯಾನವನ ಮತ್ತು ಸಿ.ಎ ನಿವೇಶನಕ್ಕೆ ಮೀಸಲಿಟ್ಟಿರುವ ಪ್ರದೇಶಕ್ಕೆ ಹೊಂದಿಕೊಂಡಂತೆ 3 ಮೀಟರ್ ಅಳತೆ ಪಾಥ್ ವೇ ನ್ನು ಸಂಘದವರು ರಚಿಸಬೇಕಾಗಿರುತ್ತದೆ. ಆದರೆ ಮೇಲ್ಕಂಡ ಸಂಘದವರು ಬಡಾವಣೆಯಲ್ಲಿ ಸಿ.ಎ, ಉದ್ಯಾನವನ, ಪಾಥ್ ವೇ ಮತ್ತು ರಸ್ತೆಗೆ ಮೀಸಲಿಟ್ಟಿರುವ ಪ್ರದೇಶಗಳನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದು, ಇದರ ಬಗ್ಗೆ ದಕ್ಷಿಣ ವಿಭಾಗದ ಸಂಬಂಧಪಟ್ಟ ಅಭಿಯಂತರರಿಂದ ವರದಿಯನ್ನು ಪಡೆಯಲಾಗಿ, ಬಡಾವಣೆಯಲ್ಲಿ ಒಟ್ಟು 323 ನಿವೇಶನಗಳಿರುತ್ತದೆ, ಅ) ಬಡಾವಣೆಯಲ್ಲಿರುವ ಒಟ್ಟು 06 ರಸ್ತೆಗಳ ಪೈಕಿ, ಬಡಾವಣೆಯಲ್ಲಿ ಗುರ್ತಿಸಿರುವ ಸಿ.ಎ ಜಾಗಕ್ಕೆ ಹೊಂದಿಕೊಂಡಿರುವ ದಕ್ಷಿಣ ದಿಕ್ಕಿಗಿರುವ ರಸ್ತೆಗೆ ನಿಗಧಿಪಡಿಸಿರುವ 12.19 ಮೀಟರ್ ಅಳತೆಯ |

ಷರಾಗೆ ಜಾಗ

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆದ ಪುಟ ಸಂಖ್ಯೆ: 05 ಕಡತದ ಸಂಖ್ಯೆ: [illegible]

ವಿಷಯ: BDA [illegible]

| ಕಂಡಿಕೆ ಸಂಖ್ಯೆ | ಟಿಪ್ಪಣಿ ಮತ್ತು ಆಜ್ಞೆ 000005 |
|---|---|
| | ರಸ್ತೆಯನ್ನು 9.14 ಮೀಟರ್ ಅಳತೆಯನ್ನಾಗಿ ಅಕ್ರಮವಾಗಿ ಒತ್ತುವರಿ ಮಾಡಿ, ನಿ.ಸಂ.01 ರಿಂದ 33 ರವರೆಗಿನ ನಿವೇಶನಗಳಿಗೆ ಹೆಚ್ಚುವರಿ ಜಾಗಗಳನ್ನು ನೀಡಿದ್ದು, ಶೇಕಡ 2.88% ರಸ್ತೆಯನ್ನು ಒತ್ತುವರಿ ಮಾಡಿರುವುದು, ಇ)ಬಡಾವಣೆಯ ನಕ್ಷೆಯಲ್ಲಿ ನಿಗಧಿಪಡಿಸಿರುವ 03 ಮೀಟರ್ ಅಗಲದ ಪಾಥ್ ವೇ ಅನ್ನು ನಿರ್ಮಿಸದೇ ಇದ್ದು, ಈ ಪಾಥ್ ವೇ ಹೊಂದಿಕೊಂಡಂತಿರುವ ನಿ.ಸಂ.264 ರಿಂದ 298 ರವರೆಗಿನ ನಿವೇಶನಗಳಿಗೆ ಹೆಚ್ಚುವರಿ ಜಾಗಗಳನ್ನು ನೀಡಿರುವುದು, ಈ) 9.14x6.1 ಮೀಟರ್ ಉದ್ದಳತೆಯ ನಿವೇಶನ ಸಂಖ್ಯೆ 312 ರಿಂದ 321 ರವರೆಗಿನ ಒಟ್ಟು 10 ನಿವೇಶನಗಳನ್ನು ಅನುಮೋದಿತಾ ನಕ್ಷೆಯಂತೆ ರಚಿಸದೇ, ಸದರಿ ನಿವೇಶನಗಳಿಗೆ ಹೊಂದಿಕೊಂಡಿರುವ ಉದ್ಯಾನವನಕ್ಕೆ ಮೀಸಲಿಟ್ಟ ಪ್ರದೇಶವನ್ನು ಹೆಚ್ಚುವರಿಯಾಗಿ ಉಪಯೋಗಿಸಿಕೊಂಡು, 6.10x12.19 ಮೀಟರ್ ಉದ್ದಳತೆಯ 03 ನಿವೇಶನಗಳು ಹಾಗೂ 9.14x12.19 ಮೀಟರ್ ಉದ್ದಳತೆಯ 9 ನಿವೇಶನಗಳು, ಹೀಗೆ ಒಟ್ಟು 12 ನಿವೇಶನಗಳನ್ನು ಅಕ್ರಮವಾಗಿ ರಚಿಸಿ, ಉದ್ಯಾನವನಕ್ಕೆ ಮೀಸಲಿಟ್ಟ ಪ್ರದೇಶದಲ್ಲಿ 0.89.% ಪ್ರದೇಶವನ್ನು ಉಪಯೋಗಿಸಿಕೊಂಡಿರುವುದು, ಅಭಿಯಂತರರು ನೀಡಿರುವ ವರದಿಯಿಂದ ಕಂಡುಬಂದಿರುತ್ತದೆ. |
| 10) | 8) ಮೇಲ್ಕಂಡ ಬಡಾವಣೆಯಲ್ಲಿ ಸಿ.ಎ ಜಾಗಕ್ಕೆಂದು ಮೀಸಲಿಟ್ಟಿರುವ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 99.60+62.30½, ಉತ್ತರದಿಂದ ದಕ್ಷಿಣಕ್ಕೆ 47.37, ಒಟ್ಟು 3834.60 ಚದುರ ಮೀಟರ್ ವಿಸ್ತೀರ್ಣದ ಸಿ.ಎ ಜಾಗವನ್ನು ಮೇಲ್ಕಂಡ ಸಂಘದವರು ಕ್ರಮವಾಗಿ ದಿನಾಂಕ;10-01-2008 ರಂದು ನೋಂದಾಯಿತ ಪರಿತ್ಯಾಜನಪತ್ರ ಮತ್ತು ದಿನಾಂಕ;30-01-2013 ರಂದು ನೋಂದಾಯಿತ ತಿದ್ದುಪಡಿ ಪರಿತ್ಯಾಜನಾ ಪತ್ರದ ಮೂಲಕ ಪ್ರಾಧಿಕಾರದ ದಕ್ಷಿಣ ವಿಭಾಗದ ಅಭಿಯಂತರರಿಗೆ ಹಸ್ತಾಂತರಿಸಿದ್ದು, ಸದರಿ ಬಡಾವಣೆಯಲ್ಲಿ ಮೀಸಲಿಟ್ಟಿರುವ ಸಿ.ಎ ಜಾಗವು ಪ್ರಾಧಿಕಾರದ ಸ್ವತ್ತಾಗಿರುತ್ತದೆ. ಪ್ರಾಧಿಕಾರದ ಸ್ವತ್ತಾಗಿರುವ ಸಿ.ಎ ಜಾಗವನ್ನು ಮೇಲ್ಕಂಡ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಮತ್ತು ಕಾರ್ಯದರ್ಶಿಗಳಾದ ಶ್ರೀ.ಎಂ.ಮಲ್ಲಣ್ಣ ರವರುಗಳು ಸೇರಿಕೊಂಡು, ಸದರಿ ಸಿ.ಎ ಜಾಗಕ್ಕೆ ನಿವೇಶನ ಸಂಖ್ಯೆ "1ಎ" ಎಂದು ಸಂಖ್ಯೆಯನ್ನು ಅಕ್ರಮವಾಗಿ ನೀಡಿ, ಈ ನಿವೇಶನದ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 86.86+59.25/2, ಉತ್ತರದಿಂದ ದಕ್ಷಿಣಕ್ಕೆ 60.36+44.60/2, ಒಟ್ಟು 3833.92 ಚದುರ ಮೀಟರ್ ವಿಸ್ತೀರ್ಣದ ಜಾಗವಾಗಿದ್ದು, ಈ ನಿವೇಶನದ ಚೆಕ್ ಬಂಧಿ ಪೂರ್ವಕ್ಕೆ=ರಸ್ತೆ, ಪಶ್ಚಿಮಕ್ಕೆ=ಉದ್ಯಾನವನ, ಉತ್ತರಕ್ಕೆ=ರಸ್ತೆ ಹಾಗೂ ದಕ್ಷಿಣಕ್ಕೆ=ನೌಕರರ ಸಂಘದ ಬಡಾವಣೆ ಎಂದು ನಮೂದಿಸಿಕೊಂಡು, ಈ ನಿವೇಶನವನ್ನು ದಿನಾಂಕ; 05-11-2015 ರಂದು ಶ್ರೀ.ಪಿ.ಉದಯ್ ಬಿನ್ ಶ್ರೀ.ಪುಟ್ಟನರಸಪ್ಪ ಮತ್ತು ಶ್ರೀಮತಿ.ಸ್ಮಿತ ಕೋಂ ಶ್ರೀ.ಶಿವಕುಮಾರ್ ಎಂಬುವರುಗಳ ಜಂಟಿ ಹೆಸರಿಗೆ ನೋಂದಾಯಿತ ಕ್ರಯಪತ್ರದ ಮೂಲಕ ಅಕ್ರಮವಾಗಿ ಮಾರಾಟ ಮಾಡಿದ್ದು, ಮಾರಾಟ ಮಾಡಿರುವ ನೈಜತೆಯ ಬಗ್ಗೆ ಸಂಬಂಧಪಟ್ಟ ಉಪ ನೋಂದಣಾಧಿಕಾರಿಯವರ ಕಛೇರಿಯಿಂದ ದೃಢೀಕೃತ ಪ್ರತಿಯನ್ನು ಹಾಗೂ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಪಡೆದುಕೊಂಡು ಪರಿಶೀಲಿಸಿಕೊಂಡಿದ್ದು, ಸಿ.ಎ ನಿವೇಶನವನ್ನು ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಮತ್ತು ಕಾರ್ಯದರ್ಶಿಗಳಾದ ಶ್ರೀ.ಎಂ.ಮಲ್ಲಣ್ಣ ರವರುಗಳು ಸೇರಿಕೊಂಡು ಅಕ್ರಮವಾಗಿ ಮಾರಾಟ ಮಾಡಿರುವುದು ದೃಢಪಟ್ಟಿರುತ್ತದೆ. |
| 11) | 9) ಮೇಲ್ಕಂಡ ಸಿ.ಎ ನಿವೇಶನವನ್ನು ಖರೀದಿ ಮಾಡಿರುವ ಶ್ರೀ.ಪಿ.ಉದಯ್ ಬಿನ್ ಶ್ರೀ.ಪುಟ್ಟನರಸಪ್ಪ ಮತ್ತು ಶ್ರೀಮತಿ.ಸ್ಮಿತ ಕೋಂ ಶ್ರೀ.ಶಿವಕುಮಾರ್ ಎಂಬುವರುಗಳಿಗೆ ದಿನಾಂಕ;27-01-2017 ಮತ್ತು ದಿನಾಂಕ;31-01-2017 ರಂದು ವಿಚಾರಣೆಗೆ ಹಾಜರಾಗುವಂತೆ ಸೂಚನಾ ಪತ್ರಗಳನ್ನು ಸಿಬ್ಬಂದಿಯವರುಗಳ ಮೂಲಕ ಖುದ್ದು ಜಾರಿ ಮಾಡಿದ್ದರೂ ಸಹ ಸದರಿಯವರುಗಳು ವಿಚಾರಣೆಗೆ ಹಾಜರಾಗಿರುವುದಿಲ್ಲ. |

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆದ ಪುಟ ಸಂಖ್ಯೆ : 06 ಕಡತದ ಸಂಖ್ಯೆ: [illegible]

ವಿಷಯ: BDA [illegible]

| ಕಂಡಿಕೆ ಸಂಖ್ಯೆ | 000006 ಟಿಪ್ಪಣಿ ಮತ್ತು ಆಜ್ಞೆ |
|---|---|
| 12 | 10) ಮೇಲ್ಕಂಡ ಸಿ.ಎ ನಿವೇಶನವನ್ನು ಸಂಘದವರು ಪ್ರಾಧಿಕಾರದ ದಕ್ಷಿಣ ವಿಭಾಗದ ಅಭಿಯಂತರರಿಗೆ ಹಸ್ತಾಂತರ ಮಾಡಿದ ನಂತರ ಸದರಿ ಸಿ.ಎ ನಿವೇಶನವನ್ನು ಸಂಬಂಧಪಟ್ಟ ದಕ್ಷಿಣ ವಿಭಾಗದ ಅಭಿಯಂತರರು ಸಿ.ಎ ವಿಭಾಗಕ್ಕೆ ಹಸ್ತಾಂತರ ಮಾಡಬೇಕಾಗಿರುತ್ತದೆ. ಮೇಲ್ಕಂಡ ಸಂಘದವರು ಸಿ.ಎ ನಿವೇಶನವನ್ನು ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿರುವ ಬಗ್ಗೆ ಹಾಗೂ ಇತರೆ ಅಂಶಗಳ ಬಗ್ಗೆ, ಸಿ.ಎ ವಿಭಾಗದಿಂದ ಮಾಹಿತಿಯನ್ನು ಪಡೆಯಲಾಗಿ, ಪ್ರಾಧಿಕಾರಕ್ಕೆ ಸೇರಿದ ಯಾವುದೇ ಸಿ.ಎ ನಿವೇಶನಗಳನ್ನು ಸಿ.ಎ ವಿಭಾಗದವರು ವಿವಿಧ ಉದ್ದೇಶಗಳಿಗಾಗಿ ಸಂಘ/ಸಂಸ್ಥೆಗಳ ಪರವಾಗಿ ಹಂಚಿಕೆ ಮಾಡಲು ಸಿ.ಎ ನಿವೇಶನದ ಹಂಚಿಕೆ ನಿಯಮಾವಳಿ-1989 ರಲ್ಲಿ ಸೂಚಿಸಿರುವಂತೆ, ಅಧಿಸೂಚನೆಯನ್ನು ಹೊರಡಿಸಿ, ಅಧಿಸೂಚನೆಯಲ್ಲಿ ಭಾಗವಹಿಸುವ ಅರ್ಹ ಸಂಘ/ಸಂಸ್ಥೆಗಳಿಗೆ 30 ವರ್ಷಗಳ ಗುತ್ತಿಗೆ ಅವಧಿಯ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದೆಂದು ಹಾಗೂ ಸಿ.ಎ ನಿವೇಶನವನ್ನು ಯಾವುದೇ ಕಾರಣಕ್ಕೂ ಖಾಸಗಿಯವರಿಗೆ ಮಾರಾಟ ಮಾಡಲು ಅವಕಾಶವಿರುವುದಿಲ್ಲವೆಂದು ತಿಳಿಸುತ್ತಾ, ಪ್ರಶ್ನಿತ ಸಿ.ಎ ನಿವೇಶನವನ್ನು ದಕ್ಷಿಣ ವಿಭಾಗದ ಅಭಿಯಂತರರು ಇದೂವರೆವಿಗೂ ಹಸ್ತಾಂತರ ಮಾಡಿರುವುದಿಲ್ಲವೆಂದು ಸಿ.ಎ ವಿಭಾಗದವರು ಲಿಖಿತ ಮೂಲಕ ವಿಚಾರಣೆಗೆ ಮಾಹಿತಿಯನ್ನು ಮತ್ತು ದಾಖಲಾತಿಗಳನ್ನು ನೀಡಿರುತ್ತಾರೆ. |
| 13 | 11) ಮೇಲ್ಕಂಡ ಬಡಾವಣೆಗೆ ಸಂಬಂಧಿಸಿದಂತೆ ನಗರ ಯೋಜನಾ ವಿಭಾಗದವರು ದಿನಾಂಕ;27-08-2008 ರಂದು ನೀಡಿರುವ **"ನಿವೇಶನಗಳ ಬಿಡುಗಡೆ ಹಿಂಬರಹ"**ದಂತೆ ಮೇಲ್ಕಂಡ ಬಡಾವಣೆಯಲ್ಲಿ ಮೇಲೆ ತಿಳಿಸಿರುವಂತೆ, ಒಟ್ಟು 143 ನಿವೇಶನಗಳಿಗೆ ಮಾತ್ರ ಪ್ರಾಧಿಕಾರದ ದಕ್ಷಿಣ ವಿಭಾಗದ ಕಂದಾಯ ಅಧಿಕಾರಿಗಳು ಖಾತಾಪತ್ರವನ್ನು ನೋಂದಣಿ ಮಾಡಬೇಕಾಗಿರುತ್ತದೆ. ಆದರೆ ಮೇಲ್ಕಂಡ ಬಡಾವಣೆ ನಕ್ಷೆಯಲ್ಲಿ ಮೀಸಲಿಟ್ಟಿರುವ ಸಿ.ಎ ಜಾಗಕ್ಕೆ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಮತ್ತು ಕಾರ್ಯದರ್ಶಿಗಳಾದ ಶ್ರೀ.ಎಂ.ಮಲ್ಲಣ್ಣ ರವರುಗಳು ಸೇರಿಕೊಂಡು ಅಕ್ರಮವಾಗಿ ನಿವೇಶನ ಸಂಖ್ಯೆ <u>"1ಎ"</u> ಎಂದು ಸಂಖ್ಯೆಯನ್ನು ನೀಡಿ, ಆ ನಿವೇಶನವನ್ನು ಶ್ರೀ.ಪಿ.ಉದಯ್ ಬಿನ್ ಶ್ರೀ.ಪುಟ್ಟನರಸಪ್ಪ ಮತ್ತು ಶ್ರೀಮತಿ.ಸ್ಮಿತ ಕೋಂ ಶ್ರೀ.ಶಿವಕುಮಾರ್ ಎಂಬುವರುಗಳ ಜಂಟಿ ಹೆಸರಿಗೆ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದು, ಹೀಗೆ ಅಕ್ರಮವಾಗಿ ಮಾರಾಟವಾಗಿರುವ ನಿವೇಶನಕ್ಕೆ ಪ್ರಾಧಿಕಾರದ ದಕ್ಷಿಣ ವಿಭಾಗದ ಕಂದಾಯ ಅಧಿಕಾರಿಗಳು ದಿನಾಂಕ;22-12-2015 ರಂದು ತಮ್ಮ ಕಚೇರಿಯ ಕ್ರಮ ಸಂಖ್ಯೆ ಬೆಂಅಪ್ರಾ/ಕಂಅ(ದ)/ಎಂ.ಕೆ.ಎಸ್-2/01/ಎ/15-16 ರಲ್ಲಿ ಶ್ರೀ.ಪಿ.ಉದಯ್ ಮತ್ತು ಶ್ರೀಮತಿ.ಸ್ಮಿತ ಎಂಬುವರುಗಳ ಜಂಟಿ ಹೆಸರಿಗೆ ಖಾತಾಪತ್ರವನ್ನು ನೋಂದಣಿ ಮಾಡಿಕೊಟ್ಟು, ತೆರಿಗೆ ಹಣವನ್ನು ಕಟ್ಟಿಸಿಕೊಂಡಿರುವುದು ಕಂಡುಬಂದಿದ್ದು, ಇದಲ್ಲದೇ ಸಂಘದವರು ಬಡಾವಣೆಯನ್ನು ಪರಿಪೂರ್ಣವಾಗಿ ಅಭಿವೃದ್ಧಿ ಪಡಿಸಿದ ನಂತರ ಬಿಡುಗಡೆ ಮಾಡಬೇಕಾಗಿರುವ ಶೇಕಡ 40 ರಷ್ಟು ನಿವೇಶನಗಳಿಗೂ ಸಹ ಪ್ರಾಧಿಕಾರದಿಂದ ಯಾವುದೇ ಅಧಿಕೃತ ಆದೇಶವಿಲ್ಲದಿದ್ದರೂ ಸಹ ಅಕ್ರಮವಾಗಿ ಖಾತಾಪತ್ರವನ್ನು ನೋಂದಣಿ ಮಾಡಿ, ತೆರಿಗೆ ಹಣವನ್ನು ಕಟ್ಟಿಸಿಕೊಂಡಿರುವುದು ಕಂಡುಬಂದಿದ್ದು, ಈ ಅಕ್ರಮದಲ್ಲಿ ದಕ್ಷಿಣ ವಿಭಾಗದ ಕಂದಾಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನೇರವಾಗಿ ಪಾಲ್ಗೊಂಡಿರುವುದು ವಿಚಾರಣೆಯಿಂದ ಕಂಡುಬಂದಿರುತ್ತದೆ. |
| 14 | 12) ದಿನಾಂಕ;02-02-2017 ರಂದು ಸಿ.ಎ ನಿವೇಶನಕ್ಕೆ ನಾನು ಮಾನ್ಯ ಎಸ್.ಪಿ ಹಾಗೂ ದಕ್ಷಿಣ ವಿಭಾಗದ ಎ.ಇ.ಇ ಶ್ರೀ.ಹೊನ್ನರಾಜು ರವರುಗಳ ಜೊತೆಯಲ್ಲಿ ಖುದ್ದು ಭೇಟಿ ನೀಡಿ ಪರಿಶೀಲನೆ ಮಾಡಿದ್ದು, ಸಿ.ಎ ನಿವೇಶನದ ಸುತ್ತಲೂ ಕಾಂಪೌಂಡ್ ಗೋಡೆ ಇದ್ದು, ಸಿ.ಎ ನಿವೇಶನದಲ್ಲಿ ಯಾರೋ ಬೋರ್ ವೆಲ್ ನ್ನು ಕೊರೆಸಿರುವುದು ಕಂಡುಬಂದಿರುತ್ತದೆ. ಸಿ.ಎ |

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆಯ ಪುಟ ಸಂಖ್ಯೆ: 07 ಕಡತದ ಸಂಖ್ಯೆ: [illegible]

ವಿಷಯ: BDA [illegible]

000007

| ಕಂಡಿಕೆ ಸಂಖ್ಯೆ | ಟಿಪ್ಪಣಿ ಮತ್ತು ಆಜ್ಞೆ |
|---|---|
| | ನಿವೇಶನದ ಸುತ್ತಲೂ ಮೇಲ್ಕಂಡ ಸಂಘದವರು ಚೈನ್ ಲಿಂಕ್ ಫೆನ್ಸಿಂಗ್ ಹಾಕಿ ಪ್ರಾಧಿಕಾರಕ್ಕೆ ಹಸ್ತಾಂತರ ಮಾಡಬೇಕಾಗಿರುವ ಬಗ್ಗೆ ಮತ್ತು ಸಿ.ಎ ನಿವೇಶನದಲ್ಲಿ ಬೋರ್ ವೆಲ್ ನ್ನು ಕೊರೆಸಿರುವ ಬಗ್ಗೆ ಸ್ಥಳದಲ್ಲಿದ್ದ ಅಭಿಯಂತರರನ್ನು ವಿಚಾರ ಮಾಡಲಾಗಿ, ಸಂಘದವರೇ ಕಾಂಪೌಂಡ್ ಗೋಡೆಯನ್ನು ಹಾಕಿದ್ದು, ಚೈನ್ ಲಿಂಕ್ ಫೆನ್ಸಿಂಗ್ ಹಾಕುವ ಬದಲು, ಕಾಂಪೌಂಡ್ ಗೋಡೆಯನ್ನು ಹಾಕಬಹುದೆಂದು ಮತ್ತು ಬೋರ್ ವೆಲ್ ನ್ನು ಕೊರೆಸಿರುವವರು ಯಾರು ಎಂಬುದು ಗೊತ್ತಿಲ್ಲವೆಂದು ತಿಳಿಸಿರುತ್ತಾರೆ. ನಾವುಗಳು ಸ್ಥಳ ಪರಿಶೀಲನೆ ಮಾಡಿದ ನಂತರ, ದಕ್ಷಿಣ ವಿಭಾಗದ ಅಭಿಯಂತರರು ಸಿ.ಎ ಜಾಗದಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಬೋರ್ ವೆಲ್‌ನ್ನು ಮತ್ತು ಪಾಥ್ ವೇ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಅನೌಪಚಾರಿಕ ಟಿಪ್ಪಣಿಯನ್ನು ನಮ್ಮ ವಿಭಾಗಕ್ಕೆ ಕಳುಹಿಸಿರುವುದನ್ನು ಗಮನಿಸಿದರೆ, ಈ ಕೃತ್ಯದಲ್ಲಿ ದಕ್ಷಿಣ ವಿಭಾಗದ ಸಂಬಂಧಪಟ್ಟ ಅಭಿಯಂತರರ ನಿರ್ಲಕ್ಷತನವು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. |
| 13) | ಮಾರ್ಪಡಿತ ಕಾರ್ಯಾದೇಶದಂತೆ, ಮೇಲ್ಕಂಡ ಬಡಾವಣೆಯಲ್ಲಿ ಮೀಸಲಿಟ್ಟಿರುವ ಉದ್ಯಾನವನ/ ಬಯಲುಜಾಗ, ಸಿ.ಎ, ಪಾಥ್ ವೇ ಮತ್ತು ರಸ್ತೆ ಪ್ರದೇಶಗಳೆಲ್ಲವೂ ಪ್ರಾಧಿಕಾರದ ಸ್ವತ್ತಾಗಿದ್ದು, ಈ ಎಲ್ಲಾ ಸ್ವತ್ತುಗಳಿಗೂ ಮೇಲ್ಕಂಡ ಸಂಘದವರು ಚೈನ್ ಲಿಂಕ್ ಫೆನ್ಸಿಂಗ್ ಹಾಕಿ ಹಸ್ತಾಂತರ ಮಾಡಿರುತ್ತಾರೆಂದು ನೋಂದಾಯಿತ ಪರಿತ್ಯಾಜನ ಪತ್ರದಲ್ಲಿ ದಕ್ಷಿಣ ವಿಭಾಗದ ಅಭಿಯಂತರರು ಖಚಿತಪಡಿಸಿಕೊಂಡು ಸಹಿಗಳನ್ನು ಮಾಡಿರುತ್ತಾರೆ. ಆದರೆ ಸಿ.ಎ ನಿವೇಶನಕ್ಕೆ ಕಾಂಪೌಂಡ್ ಗೋಡೆ ಇರುತ್ತದೆ. ಇದಲ್ಲದೇ ಮೇಲ್ಕಂಡ ಬಡಾವಣೆಯಲ್ಲಿ ಮೀಸಲಿಟ್ಟಿರುವ ಉದ್ಯಾನವನ, ಸಿ.ಎ, ಪಾಥ್ ವೇ ಮತ್ತು ರಸ್ತೆ ಪ್ರದೇಶಗಳೆಲ್ಲವನ್ನು ಸಂರಕ್ಷಿಸುವ ಜವಾಬ್ದಾರಿಯು ಸಂಬಂಧಪಟ್ಟ ದಕ್ಷಿಣ ವಿಭಾಗದ ಅಭಿಯಂತರರ ಕರ್ತವ್ಯವಾಗಿದ್ದು, ಈ ಪ್ರಕರಣದಲ್ಲಿ ಸಂಬಂಧಪಟ್ಟ ಅಭಿಯಂತರರ ಕರ್ತವ್ಯ ನಿರ್ಲಕ್ಷತನ ಮತ್ತು ಬೇಜವಾಬ್ದಾರಿತನವು ಎದ್ದು ತೋರಿಸುತ್ತಿದ್ದು, ಕಾರಣಕರ್ತರಾದ ಅಭಿಯಂತರರ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವುದು ಅವಶ್ಯಕವಾಗಿರುತ್ತದೆ. |
| 14) | ಮೇಲ್ಕಂಡ ಸಂಘದವರಿಗೆ ಮೊದಲು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) 07 ಎಕರೆ ಜಮೀನನ್ನು ದಿನಾಂಕ;13-06-2007 ರಂದು, ನಂತರ ದಿನಾಂಕ;14-11-2007 ರಂದು ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ರಲ್ಲಿ 01 ಎಕರೆ 38 ಗುಂಟೆ ಮತ್ತು 7(ಪಿ) ರಲ್ಲಿ 03 ಎಕರೆ 02 ಗುಂಟೆ, 05 ಜಮೀನು, ದಿನಾಂಕ;28-06-2011 ರಂದು ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ಮತ್ತು 7(ಪಿ) ರಲ್ಲಿ 03 ಎಕರೆ ಜಮೀನನ್ನು, ಹೀಗೆ ಒಟ್ಟು 15 ಎಕರೆ ಜಮೀನನ್ನು ಪ್ರಾಧಿಕಾರದಿಂದ ನೋಂದಾಯಿತ ಕ್ರಯಪತ್ರಗಳ ಮೂಲಕ ಮಾರಾಟ ಮಾಡಲಾಗಿರುತ್ತದೆ. ಆದರೆ ಸಂಘದವರು ನೀಡಿರುವ ಮನವಿಯಂತೆ ಹಾಗೂ ಭೂಸ್ವಾಧೀನ ವಿಭಾಗದ ಭೂಮಾಪಕರು ನೀಡಿರುವ ನಕ್ಷೆ & ವರದಿಯಂತೆ, ಸಂಘದವರಿಗೆ ಹಂಚಿಕೆಯಾಗಿರುವ 15 ಎಕರೆ ಜಮೀನುಗಳು ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ ¼(ಪಿ) 6(ಪಿ), 7/1(ಪಿ), 7/5(ಪಿ), 7/6(ಪಿ), 7/8(ಪಿ) & 7/9(ಪಿ) ರಲ್ಲಿ ಬರುವುದಾಗಿ ತಿಳಿಸಿದ್ದು, ಇದರ ಆಧಾರದ ಮೇಲೆ ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ ¼(ಪಿ) 6(ಪಿ), 7/1(ಪಿ), 7/5(ಪಿ), 7/6(ಪಿ), 7/8(ಪಿ) & 7/9(ಪಿ) ರಲ್ಲಿನ ಒಟ್ಟು 15 ಎಕರೆ ಜಮೀನಿಗೆ ಪ್ರಾಧಿಕಾರದಿಂದ ಮಾರ್ಪಾಡಿತ ವಸತಿ ಬಡಾವಣೆ ನಕ್ಷೆಯನ್ನು ಮೇಲ್ಕಂಡ ಸಂಘದವರ ಪರವಾಗಿ ಮಂಜೂರು ಮಾಡಲಾಗಿರುತ್ತದೆ. ಆದರೆ ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ ¼(ಪಿ) 6(ಪಿ), 7/1(ಪಿ), 7/5(ಪಿ), 7/6(ಪಿ), 7/8(ಪಿ) & 7/9(ಪಿ) ಈ ಎಲ್ಲಾ ಸರ್ವೆ ನಂಬರ್ ಗಳಲ್ಲಿ ಎಷ್ಟು ಎಕರೆ ಎಷ್ಟು ಗುಂಟೆ ಜಮೀನುಗಳಿರುತ್ತದೆಂಬುದರ ಬಗ್ಗೆ ಹಾಗೂ ಸದರಿ ಸರ್ವೆ ನಂಬರ್ ಗಳ ಮಾಲೀಕತ್ವದ ಬಗ್ಗೆ, ನಗರ ಯೋಜನಾ ವಿಭಾಗದವರು ಭೂಸ್ವಾಧೀನ ವಿಭಾಗದಿಂದ ಅಥವಾ ಸಂಬಂಧಪಟ್ಟ ಅಭಿಯಂತರರಿಂದ ಸ್ಪಷ್ಟವಾಗಿ ದಾಖಲಾತಿಗಳ ಮೂಲಕ ದೃಢೀಕರಿಸಿಕೊಳ್ಳದೇ, ಕೇವಲ ಸಂಘದವರು ನೀಡಿರುವ ಮನವಿ ಪತ್ರದ ಆಧಾರದ ಮೇಲೆ ಹಾಗೂ |

ಹೊರಗೆ ಬಾಗ

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆಯ ಪುಟ ಸಂಖ್ಯೆ: 08 ಕಡತದ ಸಂಖ್ಯೆ: [illegible]

ವಿಷಯ: B.D.A [illegible]

| ಕಂಡಿಕೆ ಸಂಖ್ಯೆ | 000008 ಟಿಪ್ಪಣಿ ಮತ್ತು ಆಜ್ಞೆ |
|---|---|

ಭೂಸ್ವಾಧೀನ ವಿಭಾಗದ ಭೂಮಾಪಕರು ನೀಡಿರುವ ನಕ್ಷೆ & ವರದಿಯ ಆಧಾರದ ಮೇಲೆ ಮಾರ್ಪಾಡಿತ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡಲು ಕಾರಣಕರ್ತರಾಗಿರುವುದು ಕಂಡುಬಂದಿದ್ದು, ಇದಕ್ಕೆ ಕಾರಣರಾದ ನಗರ ಯೋಜನಾ ವಿಭಾಗದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವುದು ಅವಶ್ಯಕವಾಗಿರುತ್ತದೆ.

15) ಮೇಲ್ಕಂಡ ಬಡಾವಣೆಯಲ್ಲಿ ಸಂಘದವರು ವಲಯ ನಿಯಮಾವಳಿಗಳಂತೆ ಮೀಸಲಿಟ್ಟಿರುವ ಉದ್ಯಾನವನ/ಬಯಲುಜಾಗ, ಸಿ.ಎ, ಪಾಥ್ ವೇ ಮತ್ತು ರಸ್ತೆ ಪ್ರದೇಶಗಳೆಲ್ಲವನ್ನು ದಿನಾಂಕ;10-01-2008 ರಂದು ನೋಂದಾಯಿತ ಪರಿತ್ಯಾಜನಪತ್ರ ಮತ್ತು ದಿನಾಂಕ;30-01-2013 ರಂದು ನೋಂದಾಯಿತ ತಿದ್ದುಪಡಿ ಪರಿತ್ಯಾಜನಾ ಪತ್ರದ ಮೂಲಕ ಪ್ರಾಧಿಕಾರದ ದಕ್ಷಿಣ ವಿಭಾಗದ ಅಭಿಯಂತರರಿಗೆ ಹಸ್ತಾಂತರಿಸಿದ್ದು, ಸದರಿ ಪ್ರದೇಶಗಳೆಲ್ಲವೂ ಪ್ರಾಧಿಕಾರದ ಸ್ವತ್ತಾಗಿರುತ್ತದೆ. ಸದರಿ ಪ್ರದೇಶಗಳೆಲ್ಲವೂ ಪ್ರಾಧಿಕಾರದ ಸ್ವತ್ತುಗಳೆಂದು ಗೊತ್ತಿದ್ದರೂ ಸಹ ಮೇಲ್ಕಂಡ ಸಂಘದವರು ಅನುಮೋದಿತಾ ಮಾರ್ಪಡಿತ ವಸತಿ ಬಡಾವಣೆ ನಕ್ಷೆಯಲ್ಲಿ ಮೀಸಲಿಟ್ಟಿರುವ ರಸ್ತೆ, ಪಾಥ್ ವೇ, ಉದ್ಯಾನವನ ಮತ್ತು ಸಿ.ಎ ಜಾಗಗಳನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು, ಆ ಪ್ರದೇಶಗಳಿಗೆ ಹೊಂದಿಕೊಂಡಂತಿರುವ ನಿವೇಶನದಾರರಿಗೆ ಅಕ್ರಮವಾಗಿ ನೋಂದಾಯಿತ ಕ್ರಯಪತ್ರಗಳ ಮೂಲಕ ಮಾರಾಟ ಮಾಡಿರುವುದರಿಂದ, ಮೇಲ್ಕಂಡ ಸಂಘದವರು ಮಾರ್ಪಡಿತ ಕಾರ್ಯಾದೇಶದಲ್ಲಿನ ನಿಬಂಧನೆಗಳನ್ನು ಉಲ್ಲಂಘನೆ ಮಾಡಿರುವುದು ವಿಚಾರಣೆಯಿಂದ ಕಂಡುಬಂದಿರುತ್ತದೆ.

16) ಮೇಲ್ಕಂಡ ಬಡಾವಣೆಗೆ ಪ್ರಾಧಿಕಾರದಿಂದ ನೀಡಿರುವ ಅನುಮೋದಿತಾ ಮಾರ್ಪಡಿತ ವಸತಿ ಬಡಾವಣೆ ನಕ್ಷೆಯಲ್ಲಿ ಶೇಕಡ 55 ರಷ್ಟು ವಸತಿ ನಿವೇಶನಗಳನ್ನು ರಚಿಸಲು ಮಾತ್ರ ಸಂಘದವರಿಗೆ ಅನುಮೋದನೆಯನ್ನು ನೀಡಿರುತ್ತದೆ. ಆದರೆ ಸಂಘದವರು ಮೇಲ್ಕಂಡ ಬಡಾವಣೆಯಲ್ಲಿ ಸುಮಾರು ಶೇಕಡ 57.50 ರಷ್ಟು ವಸತಿ ನಿವೇಶನಗಳಿಗಾಗಿ ಉಪಯೋಗಿಸಿಕೊಂಡಿದ್ದು, ವಲಯ ನಿಯಮಾವಳಿಗಳಂತೆ ಮೀಸಲಿಡಬೇಕಾಗಿರುವ ಸಿ.ಎ, ಪಾಥ್ ವೇ, ಉದ್ಯಾನವನ ಮತ್ತು ರಸ್ತೆಗೆ ಮೀಸಲಿಟ್ಟಿರುವ ಪ್ರದೇಶವನ್ನು ಕಡಿಮೆ ಮಾಡಿ, ವಸತಿ ನಿವೇಶನಗಳಿಗಾಗಿ ಉಪಯೋಗಿಸಿಕೊಂಡಿರುವ ಶೇಕಡ 57.50 ರಷ್ಟು ಪ್ರದೇಶಕ್ಕೆ ಹೊಸದಾಗಿ ಮಾರ್ಪಡಿತ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡುವಂತೆ, ದಿನಾಂಕ;10-03-2016 ರಂದು ಮನವಿ ಪತ್ರದೊಂದಿಗೆ ಕರಡು ನಕ್ಷೆಯನ್ನು ನಗರ ಯೋಜನಾ ವಿಭಾಗಕ್ಕೆ ಸಲ್ಲಿಸಿದ್ದು, ಇದರ ಬಗ್ಗೆ ಪ್ರಾಧಿಕಾರದಿಂದ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳದೇ ಇರುವುದರಿಂದ, ಮೇಲೆ ತಿಳಿಸಿರುವಂತೆ ಒತ್ತುವರಿ ಮಾಡಿರುವುದೆಲ್ಲವೂ ಅಕ್ರಮವಾಗಿರುವುದು ವಿಚಾರಣೆಯಿಂದ ಕಂಡುಬಂದಿರುತ್ತದೆ.

ಮುಂದಿನ ಭಾಗ

ಮೇಲಿನ ಎಲ್ಲಾ ಅಂಶಗಳಿಂದ ಕಂಡುಬಂದಿರುವುದೇನೆಂದರೆ,ಮೇಲ್ಕಂಡ ಸಂಘದವರಿಗೆ ಮೊದಲು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) 07 ಎಕರೆ ಜಮೀನನ್ನು ದಿನಾಂಕ;13-06-2007 ರಂದು, ನಂತರ ದಿನಾಂಕ;14-11-2007 ರಂದು ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ರಲ್ಲಿ 01 ಎಕರೆ 38 ಗುಂಟೆ ಮತ್ತು 7(ಪಿ) ರಲ್ಲಿ 03 ಎಕರೆ 02 ಗುಂಟೆ, 05 ಜಮೀನು, ದಿನಾಂಕ;28-06-2011 ರಂದು ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ಮತ್ತು 7(ಪಿ) ರಲ್ಲಿ 03 ಎಕರೆ ಜಮೀನನ್ನು, ಹೀಗೆ ಒಟ್ಟು 15 ಎಕರೆ ಜಮೀನನ್ನು ಪ್ರಾಧಿಕಾರದಿಂದ ನೋಂದಾಯಿತ ಕ್ರಯಪತ್ರಗಳ ಮೂಲಕ ಮಾರಾಟ ಮಾಡಲಾಗಿರುತ್ತದೆ. ಆದರೆ ಸಂಘದವರು ನೀಡಿರುವ ಮನವಿಯಂತೆ ಹಾಗೂ ಭೂಸ್ವಾಧೀನ ವಿಭಾಗದ ಭೂಮಾಪಕರು ನೀಡಿರುವ ನಕ್ಷೆ & ವರದಿಯಂತೆ, ಸಂಘದವರಿಗೆ ಹಂಚಿಕೆಯಾಗಿರುವ 15 ಎಕರೆ ಜಮೀನುಗಳು ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ ¼(ಪಿ) 6(ಪಿ), 7/1(ಪಿ), 7/5(ಪಿ),

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆದ ಪುಟ ಸಂಖ್ಯೆ : 09 ಕಡತದ ಸಂಖ್ಯೆ: [illegible]

ವಿಷಯ: BDA [illegible]

| ಕಂಡಿಕೆ ಸಂಖ್ಯೆ | ಟಿಪ್ಪಣಿ ಮತ್ತು ಆಜ್ಞೆ 000009 |
|---|---|
| | 7/6(ಪಿ), 7/8(ಪಿ) & 7/9(ಪಿ) ರಲ್ಲಿ ಬರುವುದಾಗಿ ತಿಳಿಸಿದ್ದು, ಇದರ ಆಧಾರದ ಮೇಲೆ ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ ¼(ಪಿ) 6(ಪಿ), 7/1(ಪಿ), 7/5(ಪಿ), 7/6(ಪಿ), 7/8(ಪಿ) & 7/9(ಪಿ) ರಲ್ಲಿನ ಒಟ್ಟು 15 ಎಕೆರೆ ಜಮೀನಿಗೆ ಪ್ರಾಧಿಕಾರದಿಂದ ಬಿ.ಡಿ.ಎ ಎಂಪ್ಲಾಯೀಸ್ ವೆಲ್ ಫೇರ್ ಅಸೋಸಿಯೇಷನ್(ರಿ) ಸಂಘದರವ ಪರವಾಗಿ ಠರಾವು ಸಂಖ್ಯೆ 172/2012 ರ ತೀರ್ಮಾನದಂತೆ ಮಾರ್ಪಡಿತ ವಸತಿ ಬಡಾವಣೆ ನಕ್ಷೆಗೆ ಅನುಮೋದನೆಯನ್ನು ನೀಡಿರುತ್ತದೆ. ಅದರಂತೆ ಸಂಘದವರು ಮೇಲ್ಕಂಡ ಬಡಾವಣೆಯಲ್ಲಿ ವಲಯ ನಿಯಮಾವಳಿಗಳಂತೆ ಮೀಸಲಿಟ್ಟಿರುವ ಉದ್ಯಾನವನ/ಬಯಲುಜಾಗ, ಸಿ.ಎ, ಪಾಥ್ ವೇ ಮತ್ತು ರಸ್ತೆ ಪ್ರದೇಶಗಳೆಲ್ಲವನ್ನು ದಿನಾಂಕ;10-01-2008 ರಂದು ನೋಂದಾಯಿತ ಪರಿತ್ಯಾಜನಪತ್ರ ಮತ್ತು ದಿನಾಂಕ;30-01-2013 ರಂದು ನೋಂದಾಯಿತ ತಿದ್ದುಪಡಿ ಪರಿತ್ಯಾಜನಾ ಪತ್ರದ ಮೂಲಕ ಪ್ರಾಧಿಕಾರದ ದಕ್ಷಿಣ ವಿಭಾಗದ ಅಭಿಯಂತರರಿಗೆ ಹಸ್ತಾಂತರಿಸಿದ್ದು, ಪ್ರಾಧಿಕಾರದ ಸ್ವತ್ತಾದ ಮೇಲ್ಕಂಡ ಸಿ.ಎ ನಿವೇಶನವನ್ನು ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಮತ್ತು ಕಾರ್ಯದರ್ಶಿಗಳಾದ ಶ್ರೀ.ಎಂ.ಮಲ್ಲಣ್ಣ ರವರುಗಳು ಸೇರಿಕೊಂಡು ಖಾಸಗಿ ವ್ಯಕ್ತಿಗಳಾದ ಶ್ರೀ.ಪಿ.ಉದಯ್ ಮತ್ತು ಶ್ರೀಮತಿ.ಸ್ಮಿತ ಎಂಬುವರುಗಳ ಜಂಟಿ ಹೆಸರಿಗೆ ದಿನಾಂಕ;05-11-2015 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುವುದಲ್ಲದೇ, ರಸ್ತೆ, ಉದ್ಯಾನವನ ಮತ್ತು ಪಾಥ್ ವೇ ಗೆ ಮೀಸಲಿಟ್ಟಿದ್ದ ಪ್ರದೇಶವನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು, ಒತ್ತುವರಿ ಮಾಡಿಕೊಂಡ ಜಾಗಗಳನ್ನು ಆ ಪ್ರದೇಶಗಳಿಗೆ ಹೊಂದಿಕೊಂಡಂತಿರುವ ನಿವೇಶನದಾರರಿಗೆ ಅಕ್ರಮವಾಗಿ ಮಾರಾಟ ಮಾಡಿರುವುದು ವಿಚಾರಣೆಯಿಂದ ಕಂಡುಬಂದಿದ್ದು, ಈ ಪ್ರಕರಣದಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಕೂಡಲೇ ಕ್ರಮಕ್ಕೈಗೊಳ್ಳುವುದು ಅವಶ್ಯಕವಾಗಿರುತ್ತದೆ. |
| ೩೦) | 1) ಮೇಲ್ಕಂಡ ಬಡಾವಣೆಯಲ್ಲಿ ವಲಯ ನಿಯಮಾವಳಿಗಳಂತೆ ಮೀಸಲಿಟ್ಟಿರುವ ಸಿ.ಎ ನಿವೇಶನವನ್ನು ಅಕ್ರಮವಾಗಿ ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿರುವ ಬಿ.ಡಿ.ಎ ಎಂಪ್ಲಾಯೀಸ್ ವೆಲ್ ಫೇರ್ ಅಸೋಸಿಯೇಷನ್(ರಿ) ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಮತ್ತು ಕಾರ್ಯದರ್ಶಿಗಳಾದ ಶ್ರೀ.ಎಂ.ಮಲ್ಲಣ್ಣ ರವರುಗಳ ವಿರುದ್ಧ ದಕ್ಷಿಣ ವಿಭಾಗದ ಸಂಬಂಧಪಟ್ಟ ಅಭಿಯಂತರರು ಸಂಬಂಧಪಟ್ಟ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣವನ್ನು ದಾಖಲು ಮಾಡುವುದು. |
| ೩೧) | 2) ಮೇಲ್ಕಂಡ ಬಡಾವಣೆಯಲ್ಲಿ ಮೀಸಲಿಟ್ಟಿರುವ ಉದ್ಯಾನವನ/ಬಯಲುಜಾಗ, ಸಿ.ಎ, ಪಾಥ್ ವೇ ಮತ್ತು ರಸ್ತೆ ಪ್ರದೇಶಗಳೆಲ್ಲವೂ ಪ್ರಾಧಿಕಾರದ ಸ್ವತ್ತಾಗಿದ್ದು, ಉದ್ಯಾನವನ, ಸಿ.ಎ ಮತ್ತು ಪಾಥ್ ವೇ ಸ್ವತ್ತುಗಳಿಗೆಲ್ಲಾ ಮೇಲ್ಕಂಡ ಸಂಘದವರು ಚೈನ್ ಲಿಂಕ್ ಫೆನ್ಸಿಂಗ್ ಹಾಕಿ ಹಸ್ತಾಂತರ ಮಾಡಿರುತ್ತಾರೆಂದು ದಕ್ಷಿಣ ವಿಭಾಗದ ಅಭಿಯಂತರರು ಸುಳ್ಳು ಮಾಹಿತಿಯನ್ನು ನೋಂದಾಯಿತ ಪರಿತ್ಯಾಜನ ಪತ್ರ ಮತ್ತು ನೋಂದಾಯಿತ ತಿದ್ದುಪಡಿ ಪರಿತ್ಯಾಜನ ಪತ್ರದ ಮೂಲಕ ನೋಂದಾಯಿಸಿಕೊಂಡಿರುವುದು ಕಂಡುಬಂದಿದ್ದು, ಈ ವೈಫಲ್ಯಕ್ಕೆ ಕಾರಣರಾದ ಸಂಬಂಧಪಟ್ಟ ಅಭಿಯಂತರರೆಲ್ಲರ ವಿರುದ್ಧ ಶಿಸ್ತುಕ್ರಮಕ್ಕೈಗೊಳ್ಳುವುದು. |
| ೩೨) | 3) ಮೇಲ್ಕಂಡ ಬಡಾವಣೆಗೆ ಸಂಬಂಧಿಸಿದಂತೆ ನಗರ ಯೋಜನಾ ವಿಭಾಗದವರು ದಿನಾಂಕ;27-08-2008 ರಂದು ನೀಡಿರುವ "ನಿವೇಶನಗಳ ಬಿಡುಗಡೆ ಹಿಂಬರಹ"ದಲ್ಲಿ ಬಿಡುಗಡೆ ಮಾಡಲು ಸೂಚಿಸಿರುವ ನಿವೇಶನಗಳಿಗೆ ಮಾತ್ರ, ದಕ್ಷಿಣ ವಿಭಾಗದ ಕಂದಾಯ ಅಧಿಕಾರಿಗಳು ತೆರಿಗೆ ಹಣವನ್ನು ಕಟ್ಟಿಸಿಕೊಂಡು ಖಾತಾಪತ್ರವನ್ನು ನೋಂದಣಿ ಮಾಡಬೇಕಾಗಿರುತ್ತದೆ. ಆದರೆ ಈ ಬಡಾವಣೆಯಲ್ಲಿ ಅಕ್ರಮವಾಗಿ ನೋಂದಾಯಿಸಿರುವ ಸಿ.ಎ ಜಾಗವನ್ನು ಸೇರಿದಂತೆ, ಸಂಘದವರು ಬಡಾವಣೆಯನ್ನು ಪರಿಪೂರ್ಣವಾಗಿ ಅಭಿವೃದ್ಧಿ ಪಡಿಸಿದ ನಂತರ ಬಿಡುಗಡೆ ಮಾಡಬೇಕಾಗಿರುವ ಶೇಕಡ 40 ರಷ್ಟು ನಿವೇಶನಗಳಿಗೂ ಸಹ ಪ್ರಾಧಿಕಾರದಿಂದ ಯಾವುದೇ ಅಧಿಕೃತ ಆದೇಶವಿಲ್ಲವಿದ್ದರೂ ಅಕ್ರಮವಾಗಿ ಖಾತಾಪತ್ರವನ್ನು ನೋಂದಣಿ ಮಾಡಿ, ತೆರಿಗೆ ಹಣವನ್ನು ಕಟ್ಟಿಸಿಕೊಂಡಿರುವುದು ಕಂಡುಬಂದಿದ್ದು, ಈ ಅಕ್ರಮದಲ್ಲಿ ಶಾಮೀಲಾಗಿರುವ ದಕ್ಷಿಣ ವಿಭಾಗದ ಕಂದಾಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿರುದ್ಧ ಶಿಸ್ತುಕ್ರಮಕ್ಕೈಗೊಳ್ಳುವುದು. |

ಜೋಡಿಸಿದ ಜಾಗ

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆಯ ಪುಟ ಸಂಖ್ಯೆ : 10 ಕಡತದ ಸಂಖ್ಯೆ: ಲಿಂಗಧೀರನಹಳ್ಳಿ [illegible]

ವಿಷಯ: BDA [illegible]

| ಕಂಡಿಕೆ ಸಂಖ್ಯೆ | 000013 ಟಿಪ್ಪಣಿ ಮತ್ತು ಆಜ್ಞೆ |
|---|---|

23) 4) ಮೇಲ್ಕಂಡ ಬಡಾವಣೆಯಲ್ಲಿ ಮೀಸಲಿಟ್ಟಿರುವ ಉದ್ಯಾನವನ, ಸಿ.ಎ, ಪಾಥ್ ವೇ ಮತ್ತು ರಸ್ತೆ ಪ್ರದೇಶಗಳೆಲ್ಲವನ್ನು ಸಂರಕ್ಷಿಸುವ ಜವಾಬ್ದಾರಿಯು ಸಂಬಂಧಪಟ್ಟ ದಕ್ಷಿಣ ವಿಭಾಗದ ಅಭಿಯಂತರರ ಕರ್ತವ್ಯವಾಗಿದ್ದು, ಬಡಾವಣೆಯಲ್ಲಿರುವ ಪ್ರಾಧಿಕಾರದ ಸ್ವತ್ತಾದ ಸಿ.ಎ ನಿವೇಶನದಲ್ಲಿ ಬೋರ್ ವೆಲ್ ನ್ನು ಕೊರೆಸಿರುವವರು ಯಾರು ಎಂಬುದು ಗೊತ್ತಿಲ್ಲವೆಂದು ಹಾಗೂ ಉದ್ಯಾನವನ, ಪಾಥ್ ವೇ ಮತ್ತು ರಸ್ತೆಗಳನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವ ವಿಚಾರ ಗೊತ್ತಿದ್ದರೂ ಸಹ, ಇದರ ಬಗ್ಗೆ ಸಂಘದವರಿಂದ ಯಾವುದೇ ಸಮಜಾಯಿಷಿಯನ್ನು ಪಡೆದುಕೊಳ್ಳದೇ ಹಾಗೂ ಒತ್ತುವರಿ ತೆರವುಗೊಳಿಸುವ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ಇರುವುದನ್ನು ಗಮನಿದರೆ, ಅಲ್ಲಿನ ಸಂಬಂಧಪಟ್ಟ ಅಭಿಯಂತರರು ಈ ಅಕ್ರಮದಲ್ಲಿ ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಪ್ರಾಧಿಕಾರದ ಸ್ವತ್ತನ್ನು ಸಂರಕ್ಷಿಸುವಲ್ಲಿ ವಿಫಲರಾಗಿರುವ ಸಂಬಂಧಪಟ್ಟ ಎಲ್ಲಾ ಅಭಿಯಂತರರ ವಿರುದ್ಧ ಸೂಕ್ತ ಶಿಸ್ತು ಕ್ರಮಕ್ಕೈಗೊಳ್ಳುವುದು.

24) 5) ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ ¼(ಪಿ) 6(ಪಿ), 7/1(ಪಿ), 7/5(ಪಿ), 7/6(ಪಿ), 7/8(ಪಿ) & 7/9(ಪಿ) ಒಟ್ಟು 15 ಎಕರೆ ಜಮೀನಿಗೆ ಮೇಲ್ಕಂಡ ಸಂಘದವರ ಪರವಾಗಿ ಈಗಾಗಲೇ ಮಾರ್ಪಡಿತ ವಸತಿ ಬಡಾವಣೆ ನಕ್ಷೆಯನ್ನು ಅನುಮೋದಿಸಿದ್ದು, ಅನುಮೋದಿತ ನಕ್ಷೆಯಲ್ಲಿ ಸೂಚಿಸಿರುವ ಪ್ರತಿ ಸರ್ವೆ ನಂಬರ್ ಗಳಲ್ಲಿ ಎಷ್ಟು ಎಕರೆ ಎಷ್ಟು ಗುಂಟೆ ಜಮೀನುಗಳಿರುತ್ತದೆಂಬುದರ ಬಗ್ಗೆ, ಸಂಬಂಧಪಟ್ಟ ವಿಭಾಗದವರಿಂದ ಸ್ಪಷ್ಟ ಮಾಹಿತಿಯನ್ನು ಪಡೆದುಕೊಳ್ಳದೇ ಹಾಗೂ ಮಾಲೀಕತ್ವದ ಬಗ್ಗೆ ದೃಢೀಕರಿಸಿಕೊಳ್ಳದೇ, ಸಂಘದವರು ನೀಡಿರುವ ಮನವಿ ಪತ್ರದ ಆಧಾರದ ಮೇಲೆ ಹಾಗೂ ಭೂಸ್ವಾಧೀನ ವಿಭಾಗದ ಭೂಮಾಪಕರು ನೀಡಿರುವ ನಕ್ಷೆ & ವರದಿಯ ಆಧಾರದ ಮೇಲೆ, ಮಾರ್ಪಾಡಿತ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡಲು ಪ್ರಸ್ತಾವನೆಯನ್ನು ಪ್ರಾಧಿಕಾರದ ಸಭೆಗೆ ತಂದು, ಸಭೆಯಲ್ಲಿ ಅನುಮೋದನೆಯನ್ನು ಪಡೆಯಲು ಕಾರಣಕರ್ತನಾದ ನಗರ ಯೋಜನಾ ವಿಭಾಗದ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮಕ್ಕೈಗೊಳ್ಳುವುದು. ಮುಂದಿನ ಪುಟ

25) 6) ಯಾವುದೇ ಖಾಸಗಿ ಬಡಾವಣೆಯನ್ನು ಪ್ರಾಧಿಕಾರದಿಂದ ಅನುಮೋದಿಸುವಾಗ ಬಡಾವಣೆ ನಕ್ಷೆಯಲ್ಲಿ ಪ್ರತಿ ನಾಲ್ಕನೇ ರಸ್ತೆಗೆ ಅಗಲ 12.19ಮೀಟರನ್ನು ಸೂಚಿಸಬೇಕಾಗಿರುವ ಬಗ್ಗೆ ವಲಯ ನಿಯಮಾವಳಿಗಳಲ್ಲಿ ನಿಯಮವಿರುವುದು ಕಂಡುಬಂದಿದ್ದು, ಪ್ರಶ್ನಿತ ಬಡಾವಣೆಗೆ ಪ್ರಾಧಿಕಾರದಿಂದ ನೀಡಿರುವ ಅನುಮೋದಿತಾ ವಸತಿ ಬಡಾವಣೆ ನಕ್ಷೆಯಲ್ಲಿ 05ನೇ ರಸ್ತೆಗೆ 12.19ಮೀಟರನ್ನು ಸೂಚಿಸಿರುವುದು ಕಂಡುಬಂದಿದ್ದು, ಈ ರೀತಿ ಮಾಡಲು ವಲಯ ನಿಯಮಾವಳಿಗಳಲ್ಲಿ ಅವಕಾಶವಿರುತ್ತದೆಯೇ ಎಂಬುದರ ಬಗ್ಗೆ, ಸುರಿತ ಅಧಿಕಾರಿಗಳಿಂದ ಸ್ಪಷ್ಟ ಅಭಿಪ್ರಾಯವನ್ನು ಪಡೆದುಕೊಳ್ಳುವುದು. ಈ ಅಭಿಪ್ರಾಯದಲ್ಲಿ 5ನೇ ರಸ್ತೆಗೆ 12.19ಮೀಟರನ್ನುಸೂಚಿಸಲು ಅವಕಾಶವಿರುವುದಿಲ್ಲವೆಂದು ಬಂದ ಪಕ್ಷದಲ್ಲಿ ಇದಕ್ಕೆ ಕಾರಣರಾದ ನಗರ ಯೋಜನಾ ವಿಭಾಗದ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮಕ್ಕೈಗೊಳ್ಳುವುದು.

26) 7) ಮೇಲ್ಕಂಡ ಬಡಾವಣೆಗೆ ಸಂಬಂಧಿಸಿದಂತೆ ಪ್ರಾಧಿಕಾರದಿಂದ ಅಂತಿಮವಾಗಿ ನೀಡಿರುವ ಮಾರ್ಪಾಡಿತ ವಸತಿ ಬಡಾವಣೆ ನಕ್ಷೆಯಲ್ಲಿ ಮೀಸಲಿಟ್ಟಿರುವಂತೆ ರಸ್ತೆ, ಪಾಥ್ ವೇ, ಸಿ.ಎ ಹಾಗೂ ಉದ್ಯಾನವನ ಜಾಗಗಳನ್ನು ಈಗಾಗಲೇ ಮೇಲ್ಕಂಡ ಸಂಘದವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವುದರಿಂದ, ಸದರಿ ಒತ್ತುವರಿಗಳೆಲ್ಲವನ್ನೂ ತೆರವುಗೊಳಿಸಿ, ಅಂತಿಮ ಮಾರ್ಪಾಡಿತ ವಸತಿ ಬಡಾವಣೆ ನಕ್ಷೆಯಂತೆ, ಪಾಥ್ ವೇ, ಸಿ.ಎ ನಿವೇಶನ ಹಾಗೂ ಉದ್ಯಾನವನ ಜಾಗಗಳ ಹದ್ದುಬಸ್ತ್ ಗಳನ್ನು ಗುರ್ತಿಸಿಕೊಂಡು, ಈಗಾಗಲೇ ಸಿ.ಎ ಜಾಗದಲ್ಲಿ ನಿರ್ಮಿಸಿರುವ ಕಾಂಪೌಂಡ್ ಗೋಡೆಯನ್ನು ತೆರವುಗೊಳಿಸಿ, ಸಿ.ಎ ಜಾಗವನ್ನು ಸೇರಿದಂತೆ, ಪಾಥ್ ವೇ ಮತ್ತು ಉದ್ಯಾನವನ ಜಾಗಗಳಿಗೆ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸುವ ಬಗ್ಗೆ ಹಾಗೂ ಸಿ.ಎ ನಿವೇಶನದಲ್ಲಿ ಕೊರೆಸಿರುವ ಬೋರ್ ವೆಲ್ ನ್ನು ಮುಚ್ಚುವ ಬಗ್ಗೆ, ಸಂಬಂಧಪಟ್ಟ ದಕ್ಷಿಣ ವಿಭಾಗದ ಅಭಿಯಂತರರು ಕೂಡಲೇ ಕ್ರಮವನ್ನು ಕೈಗೊಳ್ಳುವುದು.

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆಯ ಪುಟ ಸಂಖ್ಯೆ : 11 ಕಡತದ ಸಂಖ್ಯೆ: [illegible]

ವಿಷಯ: B.D.A. ಎಂಪ್ಲಾಯೀಸ್ ವೆಲ್‌ಫೇರ್ [illegible]

000011

| ಕಂಡಿಕೆ ಸಂಖ್ಯೆ | ಟಿಪ್ಪಣಿ ಮತ್ತು ಆಜ್ಞೆ |
|---|---|
| 27) | ಮೇಲೆ ತಿಳಿಸಿರುವ ಎಲ್ಲಾ ಅಂಶಗಳ ಬಗ್ಗೆ ಕಾನೂನು ಅಧಿಕಾರಿಗಳಿಂದ ಸ್ಪಷ್ಟ ಅಭಿಪ್ರಾಯವನ್ನು ಪಡೆದುಕೊಂಡು, ನಂತರ ಮೇಲೆ ತಿಳಿಸಿರುವ ಅಂಶಗಳಿಗೆ ಸಂಬಂಧಪಟ್ಟ ವಿಭಾಗದವರು ಪ್ರಾಧಿಕಾರದ ನಿಯಮಾನುಸಾರ ಕೂಡಲೇ ಕ್ರಮಕ್ಕೈಗೊಳ್ಳುವುದು ಅವಶ್ಯಕವಾಗಿದ್ದು, ಈ ಪ್ರಾಥಮಿಕ ವಿಚಾರಣಾ ವರದಿಯನ್ನು ಮಾನ್ಯ ಆಯುಕ್ತರ ಗಮನಕ್ಕೆ ತಂದು, ಮೇಲೆ ಪ್ರಸ್ತಾಪಿಸಿರುವ ಅಂಶಗಳ ಬಗ್ಗೆ ಮಾನ್ಯ ಆಯುಕ್ತರು ನೀಡುವ ನಿರ್ದೇಶನದ ಮೇರೆಗೆ ಮುಂದಿನ ಕ್ರಮಕ್ಕೈಗೊಳ್ಳಬಹುದಾಗಿರುತ್ತದೆ. |
| 28) | ವಿಚಾರಣೆ ಸಂದರ್ಭದಲ್ಲಿ ಸಂಗ್ರಹಿಸಿರುವ ಮಾಹಿತಿಗಳನ್ನು ಮತ್ತು ದಾಖಲಾತಿಗಳನ್ನು ಪ್ರತ್ಯೇಕವಾಗಿ ರಚಿಸಿರುವ ಕಡತದಲ್ಲಿ ಅಳವಡಿಸಿಕೊಂಡು, ಮೇಲಿನ ಪ್ರಾಥಮಿಕ ವಿಚಾರಣಾ ವರದಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಮಂಡಿಸಿದೆ.<br><br>[signature] 15/03/2017<br>ಡಿ. ಡಬ್ಲ್ಯೂ. ಪೂವಯ್ಯ<br>ಆರಕ್ಷಕ ಉಪಾಧೀಕ್ಷಕರು<br>ವಿ.ಕಾ.ಪ & ಜಾ.ದ., ಬೆಂ.ಅ.ಪ್ರಾ<br>ಬೆಂಗಳೂರು-20 |
| 29) | ಮಾನ್ಯ ಆರಕ್ಷಕ ಅಧೀಕ್ಷಕರು) |
| 30) | ಆರಕ್ಷಕ ಉಪಾಧೀಕ್ಷಕರವರು ಕಂಡಿಕೆ 01 ರಿಂದ 28 ರವರೆಗೆ ಮಂಡಿಸಿರುವ ವಿಚಾರಣಾ ವರದಿಯನ್ನು ಪರಾಂಭರಿಸಿರುತ್ತೇನೆ.<br><br>1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಿ.ಡಿ.ಎ ನೌಕರರ ಸಂಘದವರು, ನೌಕರರಿಗೆ ನಿಯಮಗಳನ್ನು ಸಡಿಲಿಸಿ ನಿವೇಶನಗಳನ್ನು ಹಂಚಿಕೆ ಮಾಡುವಂತೆ 1996 ರಿಂದಲೂ ಪ್ರಾಧಿಕಾರಕ್ಕೆ ಮನವಿಗಳನ್ನು ಸಲ್ಲಿಸುತ್ತಾ ಬಂದಿದ್ದು, ಸುವರ್ಣ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಬೆಸ್ಕಾಂ, ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಇತರೆ ನೌಕರರಿಗೆ ವಿಶೇಷ ಸವಲತ್ತು ನೀಡಿರುವುದರಿಂದ, ತಮ್ಮ ನೌಕರರಿಗೂ ಸಹ ನಿವೇಶನಗಳನ್ನು ಹಂಚಿಕೆ ಮಾಡುವ ಸಲುವಾಗಿ 45 ಎಕರೆ ಭೂಮಿಯನ್ನು ಸಗಟಾಗಿ ಹಂಚಿಕೆ ಮಾಡುವಂತೆ ಸಂಘವು ಪ್ರಾಧಿಕಾರವನ್ನು ಕೋರಿದ್ದು, ಪ್ರಾಧಿಕಾರವು 45 ಎಕರೆ ಜಮೀನನ್ನು ಸಗಟಾಗಿ ಹಂಚಿಕೆ ಮಾಡಿ, ಜಮೀನಿನಲ್ಲಿ ನಿವೇಶನಗಳನ್ನು ರಚಿಸಿ ನೌಕರರಿಗೆ ಹಂಚಿಕೆ ಮಾಡುವ ಸಲುವಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದು, ಪ್ರಾಧಿಕಾರದ ಪ್ರಸ್ತಾವನೆಯನ್ನು ಸರ್ಕಾರವು ತನ್ನ ಆದೇಶ ಸಂಖ್ಯೆ:ನಅಇ/40/ಬೆಂಅಸೇ/2006, ದಿನಾಂಕ;19-04-2006 ರಲ್ಲಿ ತಾತ್ವಿಕ ಅನುಮೋದನೆಯನ್ನು ನೀಡಿರುತ್ತದೆ.<br><br>2) ಸರ್ಕಾರದ ಆದೇಶದಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಜೆ.ಪಿ ನಗರ 9ನೇ ಹಂತ ಬಡಾವಣೆಯನ್ನು ರಚಿಸುವ ಸಲುವಾಗಿ ಭೂಸ್ವಾಧೀನಪಡಿಸಿಕೊಂಡಿದ್ದ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂಬರ್ 15, 16 & 17 ರಲ್ಲಿ ಒಟ್ಟು 33 ಎಕರೆ 02 ಗುಂಟೆ ಜಮೀನನ್ನು ಬಿ.ಡಿ.ಎ ನೌಕರರ ಸಂಘದ ಪರವಾಗಿ ದಿನಾಂಕ;01-09-2006 ರಂದು ಸಗಟು ಹಂಚಿಕೆ ಮಾಡಿದ್ದು, ಅದರಂತೆ ಪ್ರಾಧಿಕಾರದ ಠರಾವು ಸಂಖ್ಯೆ 81/2007, ದಿನಾಂಕ;05-01-2007 ರ ತೀರ್ಮಾನದಂತೆ, ಬಿ.ಡಿ.ಎ ಎಂಪ್ಲಾಯೀಸ್ ವೆಲ್ ಫೇರ್ ಅಸೋಸಿಯೇಷನ್(ರಿ) ಸಂಘದ ಪರವಾಗಿ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡಲಾಗಿರುತ್ತದೆ. |

ಹೊರಗಿನ ಜಾಗ

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆಯ ಪುಟ ಸಂಖ್ಯೆ: 12 ಕಡತದ ಸಂಖ್ಯೆ: ಲಿಂಗಧೀರನಹಳ್ಳಿ ಗ್ರಾಮ

ವಿಷಯ: ಬಿ.ಡಿ.ಎ ಎಂಪ್ಲಾಯಿಸ್ ವೆಲ್‌ಫೇರ್ ಅಸೋಸಿಯೇಷನ್‌ನ ವಿಸ್ತರಣ ವರದಿ

| ಕಂಡಿಕೆ ಸಂಖ್ಯೆ | 000012 ಟಿಪ್ಪಣಿ ಮತ್ತು ಆಜ್ಞೆ |
|---|---|

3) ದಿನಾಂಕ;04-04-2007 ರಂದು ಬಿ.ಡಿ.ಎ ಎಂಪ್ಲಾಯೀಸ್ ವೆಲ್ ಫೇರ್ ಅಸೋಸಿಯೇಷನ್(ರಿ) ಸಂಘದ ಅಧ್ಯಕ್ಷರು ಪ್ರಾಧಿಕಾರದ ಮಾನ್ಯ ಆಯುಕ್ತರವರಿಗೆ ಮನವಿಯನ್ನು ಸಲ್ಲಿಸಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 06 ರಲ್ಲಿನ ಜಮೀನನ್ನು ಪ್ರಾಧಿಕಾರವು ಬನಶಂಕರಿ 6ನೇ ಹಂತ ಬಡಾವಣೆಗಾಗಿ ಭೂಸ್ವಾಧೀನಪಡಿಸಿಕೊಂಡಿದ್ದು, ಸದರಿ ಜಮೀನಿನಲ್ಲಿ ಲಭ್ಯವಿರುವ ಜಮೀನನ್ನು ಸಂಘಕ್ಕೆ ಮಂಜೂರು ಮಾಡುವಂತೆ ಕೋರಿದ್ದು, ಅದರಂತೆ ಪ್ರಾಧಿಕಾರದ ಉಪ ಕಾರ್ಯದರ್ಶಿ-1 ರವರು ದಿನಾಂಕ;08-06-2007 ರಂದು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ರಲ್ಲಿ 07 ಎಕರೆ ಜಮೀನನ್ನು ಸಂಘದವರಿಗೆ ಮಂಜೂರು ಮಾಡಿದ್ದು, ಅದರಂತೆ ಪ್ರಾಧಿಕಾರವು ಜಮೀನಿಗೆ ಸಂಬಂಧಿಸಿದಂತೆ ನಿಗದಿಪಡಿಸಿರುವ ಮೌಲ್ಯವನ್ನು ಸಂಘವದರು ಪ್ರಾಧಿಕಾರಕ್ಕೆ ಸಂದಾಯ ಮಾಡಿರುತ್ತಾರೆ. ಸದರಿ 07 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪ್ರಾಧಿಕಾರದ ಸಂಬಂಧಪಟ್ಟ ದಕ್ಷಿಣ ವಿಭಾಗದ ಅಭಿಯಂತರರು ಖಚಿತ ಅಳತೆ ವರದಿಯನ್ನು ನೀಡಿದ್ದು, ನಂತರ ಸದರಿ ಜಮೀನನ್ನು ಮೇಲ್ಕಂಡ ಸಂಘದವರ ಹೆಸರಿಗೆ ದಿನಾಂಕ;13-06-2007 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಲಾಗಿರುತ್ತದೆ ಹಾಗೂ ಅದೇ ದಿನ ಸ್ವಾಧೀನ ಪತ್ರವನ್ನು ನೀಡಲಾಗಿರುತ್ತದೆ. ಸದರಿ 07 ಎಕರೆ ಜಮೀನಿಗೆ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡುವಂತೆ ಸಂಘದ ಅಧ್ಯಕ್ಷರು ದಿನಾಂಕ;26-07-2007 ರಂದು ನಗರ ಯೋಜನಾ ವಿಭಾಗಕ್ಕೆ ನಿಗಧಿತ ನಮೂನೆಯಲ್ಲಿ ಮಾಹಿತಿಗಳನ್ನು ಭರ್ತಿ ಮಾಡಿ ಜಮೀನಿಗೆ ಸಂಬಂಧಿಸಿದ ದಾಖಲಾತಿಗಳೊಂದಿಗೆ ಕರಡು ನಕ್ಷೆಯನ್ನು ಸಲ್ಲಿಸಿದ್ದು, ಸಂಘದವರು ಸಲ್ಲಿಸಿರುವ ಕರಡು ನಕ್ಷೆಯಲ್ಲಿ 07 ಎಕರೆ ಪ್ರದೇಶಕ್ಕೆ ಪೂರ್ತಿಯಾಗಿ ವಸತಿ ನಿವೇಶನಗಳನ್ನು ಸೂಚಿಸಿರುವುದು ಕಂಡುಬಂದಿದ್ದರಿಂದ, ಇವರ ಬಗ್ಗೆ ನಗರ ಯೋಜನಾ ವಿಭಾಗದವರು ಖಾಸಗಿ ಬಡಾವಣೆಗಳನ್ನು ಅನುಮೋದಿಸುವಾಗ ಕೈಗೊಳ್ಳುವ ಕ್ರಮಗಳಂತೆ, ಈ ಸಂಘಕ್ಕೂ ಸಹ ಕ್ರಮಕೈಗೊಳ್ಳಬೇಕಾಗಿದ್ದು, 07 ಎಕರೆ ಪ್ರದೇಶಕ್ಕೆ ವಲಯ ನಿಯಮಾವಳಿಗಳನ್ವಯ ಬಿಡಬೇಕಾದ 15% ರಷ್ಟು ಪ್ರದೇಶವನ್ನು ಉದ್ಯಾನವನ/ ಬಯಲುಜಾಗ/ಸಿಎ ಗಳನ್ನು ಸಂಘದವರು ಸಲ್ಲಿಸಿರುವ ಕರಡು ನಕ್ಷೆಯಲ್ಲಿ ಸೂಚಿಸದೇ ಇರುವುದರಿಂದ, ಕರಡು ನಕ್ಷೆಯ ಪಶ್ಚಿಮ ಮತ್ತು ಉತ್ತರ ಭಾಗದಲ್ಲಿ ಪ್ರಾಧಿಕಾರಕ್ಕೆ ಸೇರಿದ ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 06 & 07 ರಲ್ಲಿನ ಜಮೀನುಗಳು ಲಭ್ಯವಿದ್ದು, ಸಂಘದವರಿಗೆ ಬಾಕಿ ನೀಡಬೇಕಾಗಿರುವ ಜಮೀನಿನ ಪೈಕಿ, ಸರ್ವೆ ನಂಬರ್ 06&07 ರಲ್ಲಿ ಲಭ್ಯವಿರುವ ಜಮೀನನ್ನು ನೀಡಿ, ಒಟ್ಟು ಪ್ರದೇಶಕ್ಕೆ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡಬಹುದೆಂದು ಕಂಡಿಕೆ 29 ರಲ್ಲಿ ನಗರ ಯೋಜನಾ ಸದಸ್ಯರು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದು ಅದರಂತೆ ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ರಲ್ಲಿ 01 ಎಕರೆ 38 ಗುಂಟೆ ಮತ್ತು 7(ಪಿ) ರಲ್ಲಿ 03 ಎಕರೆ 02 ಗುಂಟೆ ಜಮೀನನ್ನು ಒಟ್ಟು 05 ಎಕರೆ ಜಮೀನನ್ನುಸಹ ಮೇಲ್ಕಂಡ ಸಂಘವದರು ಪ್ರಾಧಿಕಾರದಿಂದ ದಿನಾಂಕ;14-11-2007 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿ ಮಾಡಿ ಅದೇ ದಿನ ಸ್ವಾಧೀನ ಪತ್ರವನ್ನು ಸಹ ಪಡೆದುಕೊಂಡಿದ್ದು, ಈ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ದಕ್ಷಿಣ ವಿಭಾಗದ ಅಭಿಯಂತರರು ಖಚಿತ ಅಳತೆ ವರದಿಯನ್ನು ಸಹ ನೀಡಿರುತ್ತಾರೆ. ಹೀಗೆ ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ಮತ್ತು 7(ಪಿ) ರಲ್ಲಿ ಒಟ್ಟು 12 ಎಕರೆ ಜಮೀನಿಗೆ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡುವಂತೆ ಕರಡು ನಕ್ಷೆಯೊಂದಿಗೆ ಸಂಘದವರು ಕೋರಿದ್ದು, ಈ ವಿಷಯವನ್ನು ಪ್ರಾಧಿಕಾರದ ಠರಾವು ಸಂಖ್ಯೆ 288/2007, ದಿ;21-11-2007 ರಲ್ಲಿ ಚರ್ಚಿಸಿ, ಮೇಲ್ಕಂಡ ಸಂಘದವರ ಪರವಾಗಿ ವಸತಿ ಬಡಾವಣೆ ನಕ್ಷೆಯನ್ನು ಅನುಮೋದಿಸಲಾಗಿರುತ್ತದೆ. ಅನುಮೋದಿತಾ ವಸತಿ ಬಡಾವಣೆಯಲ್ಲಿ ನಿಬಂಧನೆಗಳಂತೆ ಮೇಲ್ಕಂಡ ಸಂಘದವರು ಸ್ಥಳದಲ್ಲಿ ಬಡಾವಣೆಯನ್ನು

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆಯ ಪುಟ ಸಂಖ್ಯೆ : 13    ಕಡತದ ಸಂಖ್ಯೆ: ಲಿಂಗಧೀರನಹಳ್ಳಿ ಗ್ರಾಮ

ವಿಷಯ: ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ [illegible] ವರದಿ

000013

| ಕಂಡಿಕೆ ಸಂಖ್ಯೆ | ಟಿಪ್ಪಣಿ ಮತ್ತು ಆಜ್ಞೆ |
|---|---|

ರಚಿಸಿ, ವಲಯ ನಿಯಮಾವಳಿಯಂತೆ ಉದ್ಯಾನವನ, ಸಿ.ಎ ನಿವೇಶನ ಮತ್ತು ರಸ್ತೆಗೆ ಮೀಸಲಿಟ್ಟಿರುವ ಪ್ರದೇಶವನ್ನು ದಿನಾಂಕ;10-01-2008 ರಂದು ನೋಂದಾಯಿತ ಪರಿತ್ಯಾಜನಪತ್ರದ ಮೂಲಕ ಪ್ರಾಧಿಕಾರದ ದಕ್ಷಿಣ ವಿಭಾಗದ ಅಭಿಯಂತರರ ವಿಭಾಗಕ್ಕೆ ಹಸ್ತಾಂತರ ಮಾಡಿದ್ದು, ನಂತರ ಪ್ರಾಧಿಕಾರದಿಂದ ಮೇಲ್ಕಂಡ ಸಂಘದವರ ಪರವಾಗಿ ದಿನಾಂಕ;27-08-2008 ರಂದು ಕಾರ್ಯಾದೇಶ ಪತ್ರವನ್ನು ನೀಡಲಾಗಿರುತ್ತದೆ.

4) ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ಮತ್ತು 7(ಪಿ) ರಲ್ಲಿ ಒಟ್ಟು 12 ಎಕರೆ ಜಮೀನಿಗೆ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡಿ, ಮೇಲ್ಕಂಡ ಸಂಘದವರ ಪರವಾಗಿ ದಿನಾಂಕ;27-08-2008 ರಂದು ಕಾರ್ಯಾದೇಶ ಪತ್ರವನ್ನು ನೀಡಲಾಗಿದ್ದು, ನಂತರ ಅನುಮೋದಿತ ವಸತಿ ಬಡಾವಣೆ ನಕ್ಷೆಯಂತೆ ಈ ಬಡಾವಣೆಯಲ್ಲಿ ಒಟ್ಟು 239 ನಿವೇಶನಗಳನ್ನು ಸೂಚಿಸಿದ್ದು, ಸರ್ಕಾರದ ಆದೇಶ ಸಂಖ್ಯೆ;ನಅಇ 112 ಬೆಂರೂಪ್ರಾ;2005(ಬಾ), ದಿನಾಂಕ;26-05-2005 ರನ್ವಯ ಶೇಕಡ 60 ರಷ್ಟು ವಸತಿ ನಿವೇಶನಗಳನ್ನು ಬಿಡುಗಡೆ ಮಾಡಬೇಕಾಗಿದ್ದು, ಅದರಂತೆ ನಗರ ಯೋಜನಾ ವಿಭಾಗದ ಸಂಖ್ಯೆ; ಬೆಂಅಪ್ರಾ/ನಯೋಸ/ಪಿಎಲ್-22/378/2007-08, ದಿನಾಂಕ;27-08-2008 ರ ತೀರ್ಮಾನದಂತೆ, ನಿವೇಶನಗಳ ಬಿಡುಗಡೆ ಹಿಂಬರಹದಲ್ಲಿ 2, 3, 4, 6, 8, 9, 10, 12, 14, 16, 18, 19, 20, 47, 48, 49, 51, 53, 55, 57, 59, 61, 63, 64, 67, 68, 69, 70, 71, 73, 75, 77, 79, 80, 81, 83, 84, 85, 87, 89, 91, 93, 94, 97, 98, 99, 101, 103, 104, 105, 107, 109, 111, 112, 113, 115, 117, 119, 121, 122, 123, 126, 127, 128, 130, 132, 134, 135, 136, 138, 140, 141, 143, 145, 147, 149, 150, 153, 154, 155, 157, 159, 161, 163, 165, 166, 167, 169, 171, 173, 174, 175, 176, 179, 180, 181, 183, 185, 187, 189, 191, 193, 195, 197, 198, 199, 202, 203, 204, 206, 208, 210, 212, 214, 216, 218, 219, 220, 221, 224, 225, 226, 228, 230, 232, 234, 236, 238, 240, 241, 242, 245, 246, 247, 249, 251, 253, 255, 257, 259, 260, 261 & 262 ಹೀಗೆ ಒಟ್ಟು 143 ನಿವೇಶನಗಳನ್ನು ಬಿಡುಗಡೆ ಮಾಡಲು ಹಾಗೂ ಬಡಾವಣೆಯನ್ನು ಪರಿಪೂರ್ಣವಾಗಿ ಅಭಿವೃದ್ಧಿ ಪಡಿಸಿದ ನಂತರ ಬಿಡುಗಡೆ ಮಾಡಬೇಕಾಗಿರುವ ಶೇಕಡ 40 ರಷ್ಟು ನಿವೇಶನಗಳು ಈ ರೀತಿ ಇರುತ್ತದೆ. ನಿವೇಶನ ಸಂಖ್ಯೆ 1, 5, 7, 11, 13, 15, 17, 21, 46, 50, 52, 54, 56, 58, 60, 62, 65, 66, 72, 74, 76, 78, 82, 86, 88, 90, 92, 95, 96, 100, 102, 106, 108, 110, 114, 116, 118, 120, 124, 125, 129, 131, 133, 137, 139, 142, 144, 146, 148, 151, 152, 156, 158, 160, 162, 164, 168, 170, 172, 177, 178, 182, 184, 186, 188, 190, 192, 194, 196, 200, 201, 205, 207, 209, 211, 213, 215, 217, 222, 223, 227, 229, 231, 233, 235, 237, 239, 243, 244, 248, 250, 252, 254, 256, 258 & 263 ಹೀಗೆ ಒಟ್ಟು 96 ನಿವೇಶನಗಳು.

5) ದಿನಾಂಕ;15-02-2011 ರಂದು ಮೇಲ್ಕಂಡ ಸಂಘದವರು ಪ್ರಾಧಿಕಾರದ ಮಾನ್ಯ ಆಯುಕ್ತರವರಿಗೆ ಮನವಿಯನ್ನು ಸಲ್ಲಿಸಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ಮತ್ತು 7(ಪಿ) ರಲ್ಲಿ ಲಭ್ಯವಿರುವ 03 ಎಕರೆ ಜಮೀನನ್ನು ಮಂಜೂರು ಮಾಡುವಂತೆ ಕೋರಿದ್ದು, ಅದರಂತೆ ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ಮತ್ತು 7(ಪಿ) ರಲ್ಲಿ ಲಭ್ಯವಿರುವ 03 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪ್ರಾಧಿಕಾರದ ದಕ್ಷಿಣ ವಿಭಾಗದ ಸಂಬಂಧಪಟ್ಟ ಅಭಿಯಂತರರು ಖಚಿತ ಅಳತೆ ವರದಿಯನ್ನು ನೀಡಿದ್ದು, ಈ ವರದಿಯ ಆಧಾರದ ಮೇಲೆ ಪ್ರಾಧಿಕಾರದಿಂದ ದಿನಾಂಕ;28-06-2011 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಸಂಘವರಿಗೆ ಮಾರಾಟ ಮಾಡಿದ್ದು, ಅದೇ ದಿನ ಸ್ವಾಧೀನ ಪತ್ರವನ್ನು ಸಹ

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆಯ ಪುಟ ಸಂಖ್ಯೆ : 14 ಕಡತದ ಸಂಖ್ಯೆ: ಲಿಂಗಧೀರನಹಳ್ಳಿ ಗ್ರಾಮ

ವಿಷಯ: ಬಿ.ಡಿ.ಎ. ಎಂಪ್ಲಾಯಿಸ್ ವೆಲ್ಫೇರ್ ಅಸೋಸಿಯೇಷನ್ ವಿಚಾರಣಾ ವರದಿ

| ಕಂಡಿಕೆ ಸಂಖ್ಯೆ | 000014 ಟಿಪ್ಪಣಿ ಮತ್ತು ಆಜ್ಞೆ |
|---|---|

ನೀಡಲಾಗಿರುತ್ತದೆ. ಈ 03 ಎಕರೆ ಜಮೀನಿನಲ್ಲಿ ಸಂಘದವರು ನಿವೇಶನಗಳನ್ನು ರಚಿಸಿ, ಸಂಘದ ಸದಸ್ಯರುಗಳಿಗೆ ಹಂಚಿಕೆ ಮಾಡಿದ್ದು, ಅನುಮೋದಿತಾ ಬಡಾವಣೆ ನಕ್ಷೆಯಲ್ಲಿ ಈ ನಿವೇಶನಗಳನ್ನು ಸೂಚಿಸದೇ ಇರುವುದರಿಂದ, ಸದರಿ ನಿವೇಶನಗಳಿಗೆ ಖಾತಾಪತ್ರವನ್ನು ನೋಂದಣಿ ಮಾಡಲು ಹಾಗೂ ಕಂದಾಯವನ್ನು ಕಟ್ಟಿಸಿಕೊಳ್ಳಲು ಸಾಧ್ಯವಾಗದೇ ಇದುದ್ದರಿಂದ, ಇದರ ಬಗ್ಗೆ ಸಂಘದವರು ದಿನಾಂಕ;04-10-2012 ರಂದು ಮಾನ್ಯ ಆಯುಕ್ತರವರಿಗೆ ಮನವಿಯನ್ನು ಸಲ್ಲಿಸಿ, ಮಾರ್ಪಡಿತ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡುವಂತೆ ಹಾಗೂ ಇನ್ನೂ ಬಿಡುಗಡೆ ಹೊಂದದೇ ಇರುವ ನಿವೇಶನಗಳನ್ನು ಬಿಡುಗಡೆ ಗೊಳಿಸಬೇಕೆಂದು ಕೋರಿದ್ದು, ಸಂಘದವರು ಕೋರುತ್ತಿರುವ ಮಾರ್ಪಡಿತ ವಸತಿ ಬಡಾವಣೆ ನಕ್ಷೆಯ ಕರಡು ನಕ್ಷೆಯಲ್ಲಿನ ವಿಸ್ತೀರ್ಣ ಮತ್ತು ಚೆಕ್ಕುಬಂಧಿಗಳನ್ನು ಗುರ್ತಿಸಿಕೊಡುವಂತೆ ಭೂಸ್ವಾಧೀನ ವಿಭಾಗದವರನ್ನು ಕೋರಿದ್ದು, ಅದರಂತೆ ಭೂಸ್ವಾಧೀನ ವಿಭಾಗದ ಭೂಮಾಪಕರು ಸಂಘದವರಿಗೆ ಹಂಚಿಕೆಯಾಗಿರುವ ಒಟ್ಟು 15 ಎಕರೆ ಪ್ರದೇಶದಲ್ಲಿ ನಕ್ಷೆಯನ್ನು ತಯಾರಿಸಿ ವರದಿಯನ್ನು ನೀಡಿದ್ದು, ಈ ವರದಿಯಲ್ಲಿ ಸಂಘದವರಿಗೆ ಹಂಚಿಕೆಯಾಗಿರುವ 15 ಎಕರೆ ಜಮೀನುಗಳು ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ ¼(ಪಿ) 6(ಪಿ), 7/1(ಪಿ), 7/5(ಪಿ), 7/6(ಪಿ), 7/8(ಪಿ) & 7/9(ಪಿ) ರಲ್ಲಿ ಬರುವುದಾಗಿ ತಿಳಿಸಿರುತ್ತಾರೆ.

6) ಭೂಸ್ವಾಧೀನ ವಿಭಾಗದ ಭೂಮಾಪಕರು ನೀಡಿರುವ ನಕ್ಷೆ ಮತ್ತು ವರದಿಯಂತೆ ಹಾಗೂ ಸಂಘದವರು ಸಲ್ಲಿಸಿರುವ ಕರಡು ನಕ್ಷೆಯಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ ¼(ಪಿ) 6(ಪಿ), 7/1(ಪಿ), 7/5(ಪಿ), 7/6(ಪಿ), 7/8(ಪಿ) & 7/9(ಪಿ) ರಲ್ಲಿನ ಒಟ್ಟು 15 ಎಕರೆ ಜಮೀನಿಗೆ ದಿನಾಂಕ;17-11-2012 ರಂದು ಠರಾವು ಸಂಖ್ಯೆ 172/2012 ರ ಸಭೆಯಲ್ಲಿ ಚರ್ಚಿಸಿ, ಮೇಲ್ಕಂಡ ಸಂಘದವರ ಪರವಾಗಿ ಮಾರ್ಪಡಿತ ವಸತಿ ಬಡಾವಣೆ ನಕ್ಷೆಗೆ ಅನುಮೋದನೆಯನ್ನು ನೀಡಲಾಗಿರುತ್ತದೆ. ಅದರಂತೆ ಸ್ಥಳದಲ್ಲಿ ಬಡಾವಣೆಯನ್ನು ರಚಿಸಿ, ವಲಯ ನಿಯಮಾವಳಿಯಂತೆ ಉದ್ಯಾನವನ, ಸಿ.ಎ ನಿವೇಶನ ಮತ್ತು ರಸ್ತೆಗೆ ಮೀಸಲಿಟ್ಟಿರುವ ಪ್ರದೇಶವನ್ನು ಮೇಲ್ಕಂಡ ಸಂಘದವರು ದಿನಾಂಕ;30-01-2013 ರಂದು ನೋಂದಾಯಿತ ತಿದ್ದುಪಡಿ ಪರಿತ್ಯಾಜನ ಪತ್ರದ ಮೂಲಕ ಪ್ರಾಧಿಕಾರದ ದಕ್ಷಿಣ ವಿಭಾಗದ ಅಭಿಯಂತರರ ವಿಭಾಗಕ್ಕೆ ಹಸ್ತಾಂತರ ಮಾಡಿದ್ದು, ದಿನಾಂಕ;16-02-2013 ರಂದು ಮೇಲ್ಕಂಡ ಸಂಘದ ಪರವಾಗಿ ಮಾರ್ಪಡಿತ ಕಾರ್ಯಾದೇಶ ಪತ್ರವನ್ನು ನೀಡಲಾಗಿರುತ್ತದೆ.

7) ಅನುಮೋದಿತ ಮಾರ್ಪಡಿತ ವಸತಿ ಬಡಾವಣೆ ನಕ್ಷೆಯಂತೆ,ಮೇಲ್ಕಂಡ ಬಡಾವಣೆಯಲ್ಲಿ ವಿವಿಧ ಅಳತೆಯ ಅಂದರೆ 9.14x12.19 ಮೀಟರ್ ಉದ್ದಳತೆಯ 221 ನಿವೇಶನಗಳು, 9.14x10.6 ಮೀಟರ್ ಉದ್ದಳತೆಯ 32 ನಿವೇಶನಗಳು, 9.14x9.14 ಮೀಟರ್ ಉದ್ದಳತೆಯ 08 ನಿವೇಶನಗಳು, 6.1x9.14 ಮೀಟರ್ ಉದ್ದಳತೆಯ 39 ನಿವೇಶನಗಳು, 9.14x6.1 ಮೀಟರ್ ಉದ್ದಳತೆಯ 10 ನಿವೇಶನಗಳು ಮತ್ತು ಬೆಸ ಅಳತೆಯ 11 ನಿವೇಶನಗಳು ಸೇರಿದಂತೆ, ಒಟ್ಟು 321 ನಿವೇಶನಗಳು, ಬಡಾವಣೆಯಲ್ಲಿ 9.14 ಮೀಟರ್ ಅಳತೆ ಒಟ್ಟು 05 ರಸ್ತೆಗಳನ್ನು ಮತ್ತು 12.19 ಮೀಟರ್ ಅಳತೆ ಒಂದು ರಸ್ತೆಯನ್ನು ಹಾಗೂ ಉದ್ಯಾನವನ ಮತ್ತು ಸಿ.ಎ ನಿವೇಶನಕ್ಕೆ ಮೀಸಲಿಟ್ಟಿರುವ ಪ್ರದೇಶಕ್ಕೆ ಹೊಂದಿಕೊಂಡಂತೆ 3 ಮೀಟರ್ ಅಳತೆ ಪಾಥ್ ವೇ ನ್ನು ಸಂಘದವರು ರಚಿಸಬೇಕಾಗಿರುತ್ತದೆ.

ಆದರೆ ಮೇಲ್ಕಂಡ ಸಂಘದವರು ಬಡಾವಣೆಯಲ್ಲಿ ಸಿ.ಎ, ಉದ್ಯಾನವನ, ಪಾಥ್ ವೇ ಮತ್ತು ರಸ್ತೆಗೆ ಮೀಸಲಿಟ್ಟಿರುವ ಪ್ರದೇಶಗಳನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದು, ಇದರ ಬಗ್ಗೆ ದಕ್ಷಿಣ ವಿಭಾಗದ ಸಂಬಂಧಪಟ್ಟ ಅಭಿಯಂತರರಿಂದ ವರದಿಯನ್ನು ಪಡೆಯಲಾಗಿ,

ಹೊಲಿಗೆ ಜಾಗ

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆದ ಪುಟ ಸಂಖ್ಯೆ : 15 ಕಡತದ ಸಂಖ್ಯೆ: [illegible]

ವಿಷಯ: [illegible]

| ಕಂಡಿಕೆ ಸಂಖ್ಯೆ | ಟಿಪ್ಪಣಿ ಮತ್ತು ಆಜ್ಞೆ |
|---|---|
| | ಬಡಾವಣೆಯಲ್ಲಿ ಒಟ್ಟು 323 ನಿವೇಶನಗಳಿರುತ್ತದೆ, ಆ) ಬಡಾವಣೆಯಲ್ಲಿರುವ ಒಟ್ಟು 06 ರಸ್ತೆಗಳ ಪೈಕಿ, ಬಡಾವಣೆಯಲ್ಲಿ ಗುರ್ತಿಸಿರುವ ಸಿ.ಎ ಜಾಗಕ್ಕೆ ಹೊಂದಿಕೊಂಡಿರುವ ದಕ್ಷಿಣ ದಿಕ್ಕಿಗಿರುವ ರಸ್ತೆಗೆ ನಿಗಧಿಪಡಿಸಿರುವ 12.19 ಮೀಟರ್ ಅಳತೆಯ ರಸ್ತೆಯನ್ನು 9.14 ಮೀಟರ್ ಅಳತೆಯನ್ನಾಗಿ ಅಕ್ರಮವಾಗಿ ಒತ್ತುವರಿ ಮಾಡಿ, ನಿ.ಸಂ.01 ರಿಂದ 33 ರವರೆಗಿನ ನಿವೇಶನಗಳಿಗೆ ಹೆಚ್ಚುವರಿ ಜಾಗಗಳನ್ನು ನೀಡಿದ್ದು, ಶೇಕಡ 2.88% ರಸ್ತೆಯನ್ನು ಒತ್ತುವರಿ ಮಾಡಿರುವುದು, ಇ)ಬಡಾವಣೆಯ ನಕ್ಷೆಯಲ್ಲಿ ನಿಗಧಿಪಡಿಸಿರುವ 03 ಮೀಟರ್ ಅಗಲದ ಪ್ತಾಥ್ ವೇ ಅನ್ನು ನಿರ್ಮಿಸದೇ ಇದ್ದು, ಈ ಪಾಥ್ ವೇ ಹೊಂದಿಕೊಂಡಂತಿರುವ ನಿ.ಸಂ.264 ರಿಂದ 298 ರವರೆಗಿನ ನಿವೇಶನಗಳಿಗೆ ಹೆಚ್ಚುವರಿ ಜಾಗಗಳನ್ನು ನೀಡಿರುವುದು, ಈ) 9.14x6.1 ಮೀಟರ್ ಉದ್ದಳತೆಯ ನಿವೇಶನ ಸಂಖ್ಯೆ 312 ರಿಂದ 321 ರವರೆಗಿನ ಒಟ್ಟು 10 ನಿವೇಶನಗಳನ್ನು ಅನುಮೋದಿತಾ ನಕ್ಷೆಯಂತೆ ರಚಿಸದೇ, ಸದರಿ ನಿವೇಶನಗಳಿಗೆ ಹೊಂದಿಕೊಂಡಿರುವ ಉದ್ಯಾನವನಕ್ಕೆ ಮೀಸಲಿಟ್ಟ ಪ್ರದೇಶವನ್ನು ಹೆಚ್ಚುವರಿಯಾಗಿ ಉಪಯೋಗಿಸಿಕೊಂಡು, 6.10x12.19 ಮೀಟರ್ ಉದ್ದಳತೆಯ 03 ನಿವೇಶನಗಳು ಹಾಗೂ 9.14x12.19 ಮೀಟರ್ ಉದ್ದಳತೆಯ 9 ನಿವೇಶನಗಳು, ಹೀಗೆ ಒಟ್ಟು 12 ನಿವೇಶನಗಳನ್ನು ಅಕ್ರಮವಾಗಿ ರಚಿಸಿ, ಉದ್ಯಾನವನಕ್ಕೆ ಮೀಸಲಿಟ್ಟ ಪ್ರದೇಶದಲ್ಲಿ 0.89 % ಪ್ರದೇಶವನ್ನು ಉಪಯೋಗಿಸಿಕೊಂಡಿರುವುದು, ಅಭಿಯಂತರರು ನೀಡಿರುವ ವರದಿಯಿಂದ ಕಂಡುಬಂದಿರುತ್ತದೆ. |
| | 8) ಮೇಲ್ಕಂಡ ಬಡಾವಣೆಯಲ್ಲಿ ಸಿ.ಎ ಜಾಗಕ್ಕೆಂದು ಮೀಸಲಿಟ್ಟಿರುವ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 99.60+62.30½, ಉತ್ತರದಿಂದ ದಕ್ಷಿಣಕ್ಕೆ 47.37, ಒಟ್ಟು 3834.60 ಚದುರ ಮೀಟರ್ ವಿಸ್ತೀರ್ಣದ ಸಿ.ಎ ಜಾಗವನ್ನು ಮೇಲ್ಕಂಡ ಸಂಘದವರು ಕ್ರಮವಾಗಿ ದಿನಾಂಕ;10-01-2008 ರಂದು ನೋಂದಾಯಿತ ಪರಿತ್ಯಾಜನಪತ್ರ ಮತ್ತು ದಿನಾಂಕ;30-01-2013 ರಂದು ನೋಂದಾಯಿತ ತಿದ್ದುಪಡಿ ಪರಿತ್ಯಾಜನಾ ಪತ್ರದ ಮೂಲಕ ಪ್ರಾಧಿಕಾರದ ದಕ್ಷಿಣ ವಿಭಾಗದ ಅಭಿಯಂತರರಿಗೆ ಹಸ್ತಾಂತರಿಸಿದ್ದು, ಸದರಿ ಬಡಾವಣೆಯಲ್ಲಿ ಮೀಸಲಿಟ್ಟಿರುವ ಸಿ.ಎ ಜಾಗವು ಪ್ರಾಧಿಕಾರದ ಸ್ವತ್ತಾಗಿರುತ್ತದೆ. ಪ್ರಾಧಿಕಾರದ ಸ್ವತ್ತಾಗಿರುವ ಸಿ.ಎ ಜಾಗವನ್ನು ಮೇಲ್ಕಂಡ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಮತ್ತು ಕಾರ್ಯದರ್ಶಿಗಳಾದ ಶ್ರೀ.ಎಂ.ಮಲ್ಲಣ್ಣ ರವರುಗಳು ಸೇರಿಕೊಂಡು, ಸದರಿ ಸಿ.ಎ ಜಾಗಕ್ಕೆ ನಿವೇಶನ ಸಂಖ್ಯೆ "1ಎ" ಎಂದು ಸಂಖ್ಯೆಯನ್ನು ಅಕ್ರಮವಾಗಿ ನೀಡಿ, ಈ ನಿವೇಶನದ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 86.86+59.25/2, ಉತ್ತರದಿಂದ ದಕ್ಷಿಣಕ್ಕೆ 60.36+44.60/2, ಒಟ್ಟು 3833.92 ಚದುರ ಮೀಟರ್ ವಿಸ್ತೀರ್ಣದ ಜಾಗವಾಗಿದ್ದು, ಈ ನಿವೇಶನದ ಚೆಕ್ ಬಂಧಿ ಪೂರ್ವಕ್ಕೆ=ರಸ್ತೆ, ಪಶ್ಚಿಮಕ್ಕೆ=ಉದ್ಯಾನವನ, ಉತ್ತರಕ್ಕೆ=ರಸ್ತೆ, ಹಾಗೂ ದಕ್ಷಿಣಕ್ಕೆ=ನೌಕರರ ಸಂಘದ ಬಡಾವಣೆ ಎಂದು ನಮೂದಿಸಿಕೊಂಡು, ಈ ನಿವೇಶನವನ್ನು ದಿನಾಂಕ; 05-11-2015 ರಂದು ಶ್ರೀ.ಪಿ.ಉದಯ್ ಬಿನ್ ಶ್ರೀ.ಪುಟ್ಟನರಸಪ್ಪ ಮತ್ತು ಶ್ರೀಮತಿ.ಸ್ಮಿತ ಕೋಂ ಶ್ರೀ.ಶಿವಕುಮಾರ್ ಎಂಬುವರುಗಳ ಜಂಟಿ ಹೆಸರಿಗೆ ನೋಂದಾಯಿತ ಕ್ರಯಪತ್ರದ ಮೂಲಕ ಅಕ್ರಮವಾಗಿ ಮಾರಾಟ ಮಾಡಿದ್ದು, ಮಾರಾಟ ಮಾಡಿರುವ ನೈಜತೆಯ ಬಗ್ಗೆ ಸಂಬಂಧಪಟ್ಟ ಉಪ ನೋಂದಣಾಧಿಕಾರಿಯವರ ಕಛೇರಿಯಿಂದ ದೃಢೀಕೃತ ಪ್ರತಿಯನ್ನು ಹಾಗೂ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಪಡೆದುಕೊಂಡು ಪರಿಶೀಲಿಸಿಕೊಂಡಿದ್ದು, ಸಿ.ಎ ನಿವೇಶನವನ್ನು ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಮತ್ತು ಕಾರ್ಯದರ್ಶಿಗಳಾದ ಶ್ರೀ.ಎಂ.ಮಲ್ಲಣ್ಣ ರವರುಗಳು ಸೇರಿಕೊಂಡು ಅಕ್ರಮವಾಗಿ ಮಾರಾಟ ಮಾಡಿರುವುದು ದೃಢಪಟ್ಟಿರುತ್ತದೆ. ಮೇಲ್ಕಂಡ ಸಿ.ಎ ನಿವೇಶನವನ್ನು ಖರೀದಿ ಮಾಡಿರುವ ಶ್ರೀ.ಪಿ.ಉದಯ್ ಬಿನ್ ಶ್ರೀ.ಪುಟ್ಟನರಸಪ್ಪ ಮತ್ತು ಶ್ರೀಮತಿ.ಸ್ಮಿತ ಕೋಂ ಶ್ರೀ.ಶಿವಕುಮಾರ್ ಎಂಬುವರುಗಳಿಗೆ ದಿನಾಂಕ;27-01-2017 ಮತ್ತು ದಿನಾಂಕ;31-01-2017 ರಂದು ವಿಚಾರಣೆಗೆ ಹಾಜರಾಗುವಂತೆ ಸೂಚನಾ ಪತ್ರಗಳನ್ನು ಸಿಬ್ಬಂದಿಯವರುಗಳ ಮೂಲಕ ಖುದ್ದು ಜಾರಿ ಮಾಡಿದ್ದರೂ ಸಹ ಸದರಿಯವರುಗಳು ವಿಚಾರಣೆಗೆ ಹಾಜರಾಗಿರುವುದಿಲ್ಲ. |

ಹೊಲಿಗೆ ಜಾಗ

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆದ ಪುಟ ಸಂಖ್ಯೆ : 15 ಕಡತದ ಸಂಖ್ಯೆ: ಲಿಂಗಧೀರನಹಳ್ಳಿ ಗ್ರಾಮ

ವಿಷಯ: ಬಿ.ಡಿ.ಎ. ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ವಿಚಾರಣಾ ವರ

| ಕಂಡಿಕೆ ಸಂಖ್ಯೆ | 000016 ಟಿಪ್ಪಣಿ ಮತ್ತು ಆಜ್ಞೆ |
|---|---|

9) ಮೇಲ್ಕಂಡ ಸಿ.ಎ ನಿವೇಶನವನ್ನು ಸಂಘದವರು ಪ್ರಾಧಿಕಾರದ ದಕ್ಷಿಣ ವಿಭಾಗದ ಅಭಿಯಂತರರಿಗೆ ಹಸ್ತಾಂತರ ಮಾಡಿದ ನಂತರ ಸದರಿ ಸಿ.ಎ ನಿವೇಶನವನ್ನು ಸಂಬಂಧಪಟ್ಟ ದಕ್ಷಿಣ ವಿಭಾಗದ ಅಭಿಯಂತರರು ಸಿ.ಎ ವಿಭಾಗಕ್ಕೆ ಹಸ್ತಾಂತರ ಮಾಡಬೇಕಾಗಿರುತ್ತದೆ. ಮೇಲ್ಕಂಡ ಸಂಘದವರು ಸಿ.ಎ ನಿವೇಶನವನ್ನು ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿರುವ ಬಗ್ಗೆ ಹಾಗೂ ಇತರೆ ಅಂಶಗಳ ಬಗ್ಗೆ, ಸಿ.ಎ ವಿಭಾಗದಿಂದ ಮಾಹಿತಿಯನ್ನು ಪಡೆಯಲಾಗಿ, ಪ್ರಾಧಿಕಾರಕ್ಕೆ ಸೇರಿದ ಯಾವುದೇ ಸಿ.ಎ ನಿವೇಶನಗಳನ್ನು ಸಿ.ಎ ವಿಭಾಗದವರು ವಿವಿಧ ಉದ್ದೇಶಗಳಿಗಾಗಿ ಸಂಘ/ಸಂಸ್ಥೆಗಳ ಪರವಾಗಿ ಹಂಚಿಕೆ ಮಾಡಲು ಸಿ.ಎ ನಿವೇಶನದ ಹಂಚಿಕೆ ನಿಯಮಾವಳಿ-1989 ರಲ್ಲಿ ಸೂಚಿಸಿರುವಂತೆ, ಅಧಿಸೂಚನೆಯನ್ನು ಹೊರಡಿಸಿ, ಅಧಿಸೂಚನೆಯಲ್ಲಿ ಭಾಗವಹಿಸುವ ಅರ್ಹ ಸಂಘ/ಸಂಸ್ಥೆಗಳಿಗೆ 30 ವರ್ಷಗಳ ಗುತ್ತಿಗೆ ಅವಧಿಯ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದೆಂದು ಹಾಗೂ ಸಿ.ಎ ನಿವೇಶನವನ್ನು ಯಾವುದೇ ಕಾರಣಕ್ಕೂ ಖಾಸಗಿಯವರಿಗೆ ಮಾರಾಟ ಮಾಡಲು ಅವಕಾಶವಿರುವುದಿಲ್ಲವೆಂದು ತಿಳಿಸುತ್ತಾ, ಪ್ರಶ್ನಿತ ಸಿ.ಎ ನಿವೇಶನವನ್ನು ದಕ್ಷಿಣ ವಿಭಾಗದ ಅಭಿಯಂತರರು ಇದೂವರೆವಿಗೂ ಹಸ್ತಾಂತರ ಮಾಡಿರುವುದಿಲ್ಲವೆಂದು ಸಿ.ಎ ವಿಭಾಗದವರು ಲಿಖಿತ ಮೂಲಕ ವಿಚಾರಣೆಗೆ ಮಾಹಿತಿಯನ್ನು ಮತ್ತು ದಾಖಲಾತಿಗಳನ್ನು ನೀಡಿರುತ್ತಾರೆ.

10) ಮೇಲ್ಕಂಡ ಬಡಾವಣೆಗೆ ಸಂಬಂಧಿಸಿದಂತೆ ನಗರ ಯೋಜನಾ ವಿಭಾಗದವರು ದಿನಾಂಕ;27-08-2008 ರಂದು ನೀಡಿರುವ "ನಿವೇಶನಗಳ ಬಿಡುಗಡೆ ಹಿಂಬರಹ"ದಂತೆ ಮೇಲ್ಕಂಡ ಬಡಾವಣೆಯಲ್ಲಿ ಮೇಲೆ ತಿಳಿಸಿರುವಂತೆ, ಒಟ್ಟು 143 ನಿವೇಶನಗಳಿಗೆ ಮಾತ್ರ ಪ್ರಾಧಿಕಾರದ ದಕ್ಷಿಣ ವಿಭಾಗದ ಕಂದಾಯ ಅಧಿಕಾರಿಗಳು ಖಾತಾಪತ್ರವನ್ನು ನೋಂದಣಿ ಮಾಡಬೇಕಾಗಿರುತ್ತದೆ. ಆದರೆ ಮೇಲ್ಕಂಡ ಬಡಾವಣೆ ನಕ್ಷೆಯಲ್ಲಿ ಮೀಸಲಿಟ್ಟಿರುವ ಸಿ.ಎ ಜಾಗಕ್ಕೆ ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎಸ್.ಬೆಟ್ಟೇಗೌಡ ಮತ್ತು ಕಾರ್ಯದರ್ಶಿಗಳಾದ ಶ್ರೀ.ಎಂ.ಮಲ್ಲಣ್ಣ ರವರುಗಳು ಸೇರಿಕೊಂಡು ಅಕ್ರಮವಾಗಿ ನಿವೇಶನ ಸಂಖ್ಯೆ "1ಎ" ಎಂದು ಸಂಖ್ಯೆಯನ್ನು ನೀಡಿ, ಆ ನಿವೇಶನವನ್ನು ಶ್ರೀ.ಪಿ.ಉದಯ್ ಬಿನ್ ಶ್ರೀ.ಪುಟ್ಟನರಸಪ್ಪ ಮತ್ತು ಶ್ರೀಮತಿ.ಸ್ಮಿತ ಕೋಂ ಶ್ರೀ.ಶಿವಕುಮಾರ್ ಎಂಬುವರುಗಳ ಜಂಟಿ ಹೆಸರಿಗೆ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದು, ಹೀಗೆ ಅಕ್ರಮವಾಗಿ ಮಾರಾಟವಾಗಿರುವ ನಿವೇಶನಕ್ಕೆ ಪ್ರಾಧಿಕಾರದ ದಕ್ಷಿಣ ವಿಭಾಗದ ಕಂದಾಯ ಅಧಿಕಾರಿಗಳು ದಿನಾಂಕ;22-12-2015 ರಂದು ತಮ್ಮ ಕಚೇರಿಯ ಕ್ರಮ ಸಂಖ್ಯೆ ಬೆಂಅಪ್ರಾ/ಕಂಅ(ದ)/ಎಂ.ಕೆ.ಎಸ್-2/01/ಎ/15-16 ರಲ್ಲಿ ಶ್ರೀ.ಪಿ.ಉದಯ್ ಮತ್ತು ಶ್ರೀಮತಿ.ಸ್ಮಿತ ಎಂಬುವರುಗಳ ಜಂಟಿ ಹೆಸರಿಗೆ ಖಾತಾಪತ್ರವನ್ನು ನೋಂದಣಿ ಮಾಡಿಕೊಟ್ಟು, ತೆರಿಗೆ ಹಣವನ್ನು ಕಟ್ಟಿಸಿಕೊಂಡಿರುವುದು ಕಂಡುಬಂದಿದ್ದು, ಇದಲ್ಲದೇ ಸಂಘದವರು ಬಡಾವಣೆಯನ್ನು ಪರಿಪೂರ್ಣವಾಗಿ ಅಭಿವೃದ್ಧಿ ಪಡಿಸಿದ ನಂತರ ಬಿಡುಗಡೆ ಮಾಡಬೇಕಾಗಿರುವ ಶೇಕಡ 40 ರಷ್ಟು ನಿವೇಶನಗಳಿಗೂ ಸಹ ಪ್ರಾಧಿಕಾರದಿಂದ ಯಾವುದೇ ಅಧಿಕೃತ ಆದೇಶವಿಲ್ಲವಿದ್ದರೂ ಸಹ ಅಕ್ರಮವಾಗಿ ಖಾತಾಪತ್ರವನ್ನು ನೋಂದಣಿ ಮಾಡಿ, ತೆರಿಗೆ ಹಣವನ್ನು ಕಟ್ಟಿಸಿಕೊಂಡಿರುವುದು ಕಂಡುಬಂದಿದ್ದು, ಈ ಅಕ್ರಮದಲ್ಲಿ ದಕ್ಷಿಣ ವಿಭಾಗದ ಕಂದಾಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನೇರವಾಗಿ ಪಾಲ್ಗೊಂಡಿರುವುದು ವಿಚಾರಣೆಯಿಂದ ಕಂಡುಬಂದಿರುತ್ತದೆ.

11) ದಿನಾಂಕ;02-02-2017 ರಂದು ಸಿ.ಎ ನಿವೇಶನಕ್ಕೆ ನಾನು ಮಾನ್ಯ ಎಸ್.ಪಿ ಹಾಗೂ ದಕ್ಷಿಣ ವಿಭಾಗದ ಎ.ಇ.ಇ ಶ್ರೀ.ಹೊನ್ನರಾಜು ರವರುಗಳ ಜೊತೆಯಲ್ಲಿ ಖುದ್ದು ಭೇಟಿ ನೀಡಿ ಪರಿಶೀಲನೆ ಮಾಡಿದ್ದು, ಸಿ.ಎ ನಿವೇಶನದ ಸುತ್ತಲೂ ಕಾಂಪೌಂಡ್ ಗೋಡೆ ಇದ್ದು, ಸಿ.ಎ ನಿವೇಶನದಲ್ಲಿ ಯಾರೋ ಬೋರ್ ವೆಲ್ ನ್ನು ಕೊರೆಸಿರುವುದು ಕಂಡುಬಂದಿರುತ್ತದೆ. ಸಿ.ಎ ನಿವೇಶನದ ಸುತ್ತಲೂ ಮೇಲ್ಕಂಡ ಸಂಘದವರು ಚೈನ್ ಲಿಂಕ್ ಫೆನ್ಸಿಂಗ್ ಹಾಕಿ ಪ್ರಾಧಿಕಾರಕ್ಕೆ ಹಸ್ತಾಂತರ ಮಾಡಬೇಕಾಗಿರುವ ಬಗ್ಗೆ ಮತ್ತು ಸಿ.ಎ ನಿವೇಶನದಲ್ಲಿ ಬೋರ್ ವೆಲ್ ನ್ನು

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆದ ಪುಟ ಸಂಖ್ಯೆ: 16 ಕಡತದ ಸಂಖ್ಯೆ: ಲಿಂಗಧೀರನಹಳ್ಳಿ ಗ್ರಾಮ

ವಿಷಯ: ಬಿ.ಡಿ.ಎ. ಎಂಪ್ಲಾಯೀಸ್ [illegible] ವರದಿ

| ಕಂಡಿಕೆ ಸಂಖ್ಯೆ | ಟಿಪ್ಪಣಿ ಮತ್ತು ಆಜ್ಞೆ 000017 |
|---|---|
| | ಕೊರೆಸಿರುವ ಬಗ್ಗೆ ಸ್ಥಳದಲ್ಲಿದ್ದ ಅಭಿಯಂತರರನ್ನು ವಿಚಾರ ಮಾಡಲಾಗಿ, ಸಂಘದವರೇ ಕಾಂಪೌಂಡ್ ಗೋಡೆಯನ್ನು ಹಾಕಿದ್ದು, ಚೈನ್ ಲಿಂಕ್ ಫೆನ್ಸಿಂಗ್ ಹಾಕುವ ಬದಲು, ಕಾಂಪೌಂಡ್ ಗೋಡೆಯನ್ನು ಹಾಕಬಹುದೆಂದು ಮತ್ತು ಬೋರ್ ವಲ್ ನ್ನು ಕೊರೆಸಿರುವವರು ಯಾರು ಎಂಬುದು ಗೊತ್ತಿಲ್ಲವೆಂದು ತಿಳಿಸಿರುತ್ತಾರೆ. ನಾವುಗಳು ಸ್ಥಳ ಪರಿಶೀಲನೆ ಮಾಡಿದ ನಂತರ, ದಕ್ಷಿಣ ವಿಭಾಗದ ಅಭಿಯಂತರರು ಸಿ.ಎ.ಜಾಗದಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಬೋರ್ ವೆಲ್ ನ್ನು ಮತ್ತು ಪಾಥ್ ವೇ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಅನೌಪಚಾರಿಕ ಟಿಪ್ಪಣಿಯನ್ನು ನಮ್ಮ ವಿಭಾಗಕ್ಕೆ ಕಳುಹಿಸಿರುವುದನ್ನು ಗಮನಿಸಿದರೆ, ಈ ಕೃತ್ಯದಲ್ಲಿ ದಕ್ಷಿಣ ವಿಭಾಗದ ಸಂಬಂಧಪಟ್ಟ ಅಭಿಯಂತರರ ನಿರ್ಲಕ್ಷತನವು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. |
| | 12) ಮಾರ್ಪಡಿತ ಕಾರ್ಯಾದೇಶದಂತೆ, ಮೇಲ್ಕಂಡ ಬಡಾವಣೆಯಲ್ಲಿ ಮೀಸಲಿಟ್ಟಿರುವ ಉದ್ಯಾನವನ/ಬಯಲುಜಾಗ, ಸಿ.ಎ, ಪಾಥ್ ವೇ ಮತ್ತು ರಸ್ತೆ ಪ್ರದೇಶಗಳೆಲ್ಲವೂ ಪ್ರಾಧಿಕಾರದ ಸ್ವತ್ತಾಗಿದ್ದು, ಈ ಎಲ್ಲಾ ಸ್ವತ್ತುಗಳಿಗೂ ಮೇಲ್ಕಂಡ ಸಂಘದವರು ಚೈನ್ ಲಿಂಕ್ ಫೆನ್ಸಿಂಗ್ ಹಾಕಿ ಹಸ್ತಾಂತರ ಮಾಡಿರುತ್ತಾರೆಂದು ನೋಂದಾಯಿತ ಪರಿತ್ಯಾಜನ ಪತ್ರದಲ್ಲಿ ದಕ್ಷಿಣ ವಿಭಾಗದ ಅಭಿಯಂತರರು ಖಚಿತಪಡಿಸಿಕೊಂಡು ಸಹಿಗಳನ್ನು ಮಾಡಿರುತ್ತಾರೆ. ಆದರೆ ಸಿ.ಎ ನಿವೇಶನಕ್ಕೆ ಕಾಂಪೌಂಡ್ ಗೋಡೆ ಇರುತ್ತದೆ. ಇದಲ್ಲದೇ ಮೇಲ್ಕಂಡ ಬಡಾವಣೆಯಲ್ಲಿ ಮೀಸಲಿಟ್ಟಿರುವ ಉದ್ಯಾನವನ, ಸಿ.ಎ, ಪಾಥ್ ವೇ ಮತ್ತು ರಸ್ತೆ ಪ್ರದೇಶಗಳೆಲ್ಲವನ್ನು ಸಂರಕ್ಷಿಸುವ ಜವಾಬ್ದಾರಿಯು ಸಂಬಂಧಪಟ್ಟ ದಕ್ಷಿಣ ವಿಭಾಗದ ಅಭಿಯಂತರರ ಕರ್ತವ್ಯವಾಗಿದ್ದು, ಈ ಪ್ರಕರಣದಲ್ಲಿ ಸಂಬಂಧಪಟ್ಟ ಅಭಿಯಂತರರ ಕರ್ತವ್ಯ ನಿರ್ಲಕ್ಷತನ ಮತ್ತು ಬೇಜವಾಬ್ದಾರಿತನವು ಎದ್ದು ತೋರಿಸುತ್ತಿದ್ದು, ಕಾರಣಕರ್ತರಾದ ಅಭಿಯಂತರರ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವುದು ಅವಶ್ಯಕವಾಗಿರುತ್ತದೆ. |
| | 13) ಮೇಲ್ಕಂಡ ಸಂಘದವರಿಗೆ ಮೊದಲು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) 07 ಎಕರೆ ಜಮೀನನ್ನು ದಿನಾಂಕ;13-06-2007 ರಂದು, ನಂತರ ದಿನಾಂಕ;14-11-2007 ರಂದು ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ರಲ್ಲಿ 01 ಎಕರೆ 38 ಗುಂಟೆ ಮತ್ತು 7(ಪಿ) ರಲ್ಲಿ 03 ಎಕರೆ 02 ಗುಂಟೆ, 05 ಜಮೀನು, ದಿನಾಂಕ;28-06-2011 ರಂದು ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ 6(ಪಿ) ಮತ್ತು 7(ಪಿ) ರಲ್ಲಿ 03 ಎಕರೆ ಜಮೀನನ್ನು, ಹೀಗೆ ಒಟ್ಟು 15 ಎಕರೆ ಜಮೀನನ್ನು ಪ್ರಾಧಿಕಾರದಿಂದ ನೋಂದಾಯಿತ ಕ್ರಯಪತ್ರಗಳ ಮೂಲಕ ಮಾರಾಟ ಮಾಡಲಾಗಿರುತ್ತದೆ. ಆದರೆ ಸಂಘದವರು ನೀಡಿರುವ ಮನವಿಯಂತೆ ಹಾಗೂ ಭೂಸ್ವಾಧೀನ ವಿಭಾಗದ ಭೂಮಾಪಕರು ನೀಡಿರುವ ನಕ್ಷೆ & ವರದಿಯಂತೆ, ಸಂಘದವರಿಗೆ ಹಂಚಿಕೆಯಾಗಿರುವ 15 ಎಕರೆ ಜಮೀನುಗಳು ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ ¼(ಪಿ) 6(ಪಿ), 7/1(ಪಿ), 7/5(ಪಿ), 7/6(ಪಿ), 7/8(ಪಿ) & 7/9(ಪಿ) ರಲ್ಲಿ ಬರುವುದಾಗಿ ತಿಳಿಸಿದ್ದು, ಇದರ ಆಧಾರದ ಮೇಲೆ ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ ¼(ಪಿ) 6(ಪಿ), 7/1(ಪಿ), 7/5(ಪಿ), 7/6(ಪಿ), 7/8(ಪಿ) & 7/9(ಪಿ) ರಲ್ಲಿನ ಒಟ್ಟು 15 ಎಕರೆ ಜಮೀನಿಗೆ ಪ್ರಾಧಿಕಾರದಿಂದ ಮಾರ್ಪಾಡಿತ ವಸತಿ ಬಡಾವಣೆ ನಕ್ಷೆಯನ್ನು ಮೇಲ್ಕಂಡ ಸಂಘದವರ ಪರವಾಗಿ ಮಂಜೂರು ಮಾಡಲಾಗಿರುತ್ತದೆ. ಆದರೆ ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ ¼(ಪಿ) 6(ಪಿ), 7/1(ಪಿ), 7/5(ಪಿ), 7/6(ಪಿ), 7/8(ಪಿ) & 7/9(ಪಿ) ಈ ಎಲ್ಲಾ ಸರ್ವೆ ನಂಬರ್ ಗಳಲ್ಲಿ ಎಷ್ಟು ಎಕರೆ ಎಷ್ಟು ಗುಂಟೆ ಜಮೀನುಗಳಿರುತ್ತದೆಂಬುದರ ಬಗ್ಗೆ ಹಾಗೂ ಸದರಿ ಸರ್ವೆ ನಂಬರ್ ಗಳ ಮಾಲೀಕತ್ವದ ಬಗ್ಗೆ, ನಗರ ಯೋಜನಾ ವಿಭಾಗದವರು ಭೂಸ್ವಾಧೀನ ವಿಭಾಗದಿಂದ ಅಥವಾ ಸಂಬಂಧಪಟ್ಟ ಅಭಿಯಂತರರಿಂದ ಸ್ಪಷ್ಟವಾಗಿ ದಾಖಲಾತಿಗಳ ಮೂಲಕ ದೃಢೀಕರಿಸಿಕೊಳ್ಳದೇ, ಕೇವಲ ಸಂಘದವರು ನೀಡಿರುವ ಮನವಿ ಪತ್ರದ ಆಧಾರದ ಮೇಲೆ ಹಾಗೂ ಭೂಸ್ವಾಧೀನ ವಿಭಾಗದ ಭೂಮಾಪಕರು ನೀಡಿರುವ ನಕ್ಷೆ & ವರದಿಯ ಆಧಾರದ ಮೇಲೆ ಮಾರ್ಪಾಡಿತ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡಲು ಕಾರಣಕರ್ತರಾಗಿರುವುದು ಕಂಡುಬಂದಿದ್ದು, ಇದಕ್ಕೆ ಕಾರಣರಾದ ನಗರ ಯೋಜನಾ ವಿಭಾಗದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವುದು ಅವಶ್ಯಕವಾಗಿರುತ್ತದೆ. |

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆಯ ಪುಟ ಸಂಖ್ಯೆ : 17 ಕಡತದ ಸಂಖ್ಯೆ: ಲಿಂಗಧೀರನಹಳ್ಳಿ ಗ್ರಾಮ

ವಿಷಯ: ಬಿ.ಡಿ.ಎ. ಎಂಪ್ಲಾಯೀಸ್ ವೆಲ್ ಫೇರ್ ಅಸೋಸಿಯೇಷನ್‌ನ [illegible]

| ಕಂಡಿಕೆ ಸಂಖ್ಯೆ | 000018 ಟಿಪ್ಪಣಿ ಮತ್ತು ಆಜ್ಞೆ |
|---|---|

14) ಮೇಲ್ಕಂಡ ಬಡಾವಣೆಯಲ್ಲಿ ಸಂಘದವರು ವಲಯ ನಿಯಮಾವಳಿಗಳಂತೆ ಮೀಸಲಿಟ್ಟಿರುವ ಉದ್ಯಾನವನ/ಬಯಲುಜಾಗ, ಸಿ.ಎ, ಪಾಥ್ ವೇ ಮತ್ತು ರಸ್ತೆ ಪ್ರದೇಶಗಳೆಲ್ಲವನ್ನು ದಿನಾಂಕ;10-01-2008 ರಂದು ನೋಂದಾಯಿತ ಪರಿತ್ಯಾಜನಪತ್ರ ಮತ್ತು ದಿನಾಂಕ;30-01-2013 ರಂದು ನೋಂದಾಯಿತ ತಿದ್ದುಪಡಿ ಪರಿತ್ಯಾಜನಾ ಪತ್ರದ ಮೂಲಕ ಪ್ರಾಧಿಕಾರದ ದಕ್ಷಿಣ ವಿಭಾಗದ ಅಭಿಯಂತರರಿಗೆ ಹಸ್ತಾಂತರಿಸಿದ್ದು, ಸದರಿ ಪ್ರದೇಶಗಳೆಲ್ಲವೂ ಪ್ರಾಧಿಕಾರದ ಸ್ವತ್ತಾಗಿರುತ್ತದೆ. ಸದರಿ ಪ್ರದೇಶಗಳೆಲ್ಲವೂ ಪ್ರಾಧಿಕಾರದ ಸ್ವತ್ತುಗಳೆಂದು ಗೊತ್ತಿದ್ದರೂ ಸಹ ಮೇಲ್ಕಂಡ ಸಂಘದವರು ಅನುಮೋದಿತಾ ಮಾರ್ಪಡಿತ ವಸತಿ ಬಡಾವಣೆ ನಕ್ಷೆಯಲ್ಲಿ ಮೀಸಲಿಟ್ಟಿರುವ ರಸ್ತೆ, ಪಾಥ್ ವೇ, ಉದ್ಯಾನವನ ಮತ್ತು ಸಿ.ಎ ಜಾಗಗಳನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು, ಆ ಪ್ರದೇಶಗಳಿಗೆ ಹೊಂದಿಕೊಂಡಂತಿರುವ ನಿವೇಶನದಾರರಿಗೆ ಅಕ್ರಮವಾಗಿ ನೋಂದಾಯಿತ ಕ್ರಯಪತ್ರಗಳ ಮೂಲಕ ಮಾರಾಟ ಮಾಡಿರುವುದರಿಂದ, ಮೇಲ್ಕಂಡ ಸಂಘದವರು ಮಾರ್ಪಡಿತ ಕಾರ್ಯಾದೇಶದಲ್ಲಿನ ನಿಬಂಧನೆಗಳನ್ನು ಉಲ್ಲಂಘನೆ ಮಾಡಿರುವುದು ವಿಚಾರಣೆಯಿಂದ ಕಂಡುಬಂದಿರುತ್ತದೆ.

15) ಮೇಲ್ಕಂಡ ಬಡಾವಣೆಗೆ ಪ್ರಾಧಿಕಾರದಿಂದ ನೀಡಿರುವ ಅನುಮೋದಿತಾ ಮಾರ್ಪಡಿತ ವಸತಿ ಬಡಾವಣೆ ನಕ್ಷೆಯಲ್ಲಿ ಶೇಕಡ 55 ರಷ್ಟು ವಸತಿ ನಿವೇಶನಗಳನ್ನು ರಚಿಸಲು ಮಾತ್ರ ಸಂಘದವರಿಗೆ ಅನುಮೋದನೆಯನ್ನು ನೀಡಿರುತ್ತದೆ. ಆದರೆ ಸಂಘದವರು ಮೇಲ್ಕಂಡ ಬಡಾವಣೆಯಲ್ಲಿ ಸುಮಾರು ಶೇಕಡ 57.50 ರಷ್ಟು ವಸತಿ ನಿವೇಶನಗಳಿಗಾಗಿ ಉಪಯೋಗಿಸಿಕೊಂಡಿದ್ದು, ವಲಯ ನಿಯಮಾವಳಿಗಳಂತೆ ಮೀಸಲಿಡಬೇಕಾಗಿರುವ ಸಿ.ಎ, ಪಾಥ್ ವೇ, ಉದ್ಯಾನವನ ಮತ್ತು ರಸ್ತೆಗೆ ಮೀಸಲಿಟ್ಟಿರುವ ಪ್ರದೇಶವನ್ನು ಕಡಿಮೆ ಮಾಡಿ, ವಸತಿ ನಿವೇಶನಗಳಿಗಾಗಿ ಉಪಯೋಗಿಸಿಕೊಂಡಿರುವ ಶೇಕಡ 57.50 ರಷ್ಟು ಪ್ರದೇಶಕ್ಕೆ ಹೊಸದಾಗಿ ಮಾರ್ಪಡಿತ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡುವಂತೆ, ದಿನಾಂಕ;10-03-2016 ರಂದು ಮನವಿ ಪತ್ರದೊಂದಿಗೆ ಕರಡು ನಕ್ಷೆಯನ್ನು ನಗರ ಯೋಜನಾ ವಿಭಾಗಕ್ಕೆ ಸಲ್ಲಿಸಿದ್ದು, ಇದರ ಬಗ್ಗೆ ಪ್ರಾಧಿಕಾರದಿಂದ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳದೇ ಇರುವುದರಿಂದ, ಮೇಲೆ ತಿಳಿಸಿರುವಂತೆ ಒತ್ತುವರಿ ಮಾಡಿರುವುದೆಲ್ಲವೂ ಅಕ್ರಮವಾಗಿರುವುದು ವಿಚಾರಣೆಯಿಂದ ಕಂಡುಬಂದಿರುತ್ತದೆ.

31) ಈ ಪ್ರಕರಣದಲ್ಲಿ ಆರಕ್ಷಕ ಉಪಾಧೀಕ್ಷಕರವರು ಪ್ರಸ್ತಾಪಿಸಿರುವಂತೆ ಹಾಗೂ ಪ್ರಸ್ತುತ ದಾಖಲಾತಿಗಳ ಪರಿಶೀಲನೆಯಂತೆ ಈ ಕೆಳಕಂಡ ಅಂಶಗಳ ಬಗ್ಗೆ, ಸಂಬಂಧಪಟ್ಟ ವಿಭಾಗದವರು ಅತಿ ಜರೂರಾಗಿ ಪ್ರಾಧಿಕಾರದ ನಿಯಮಾನುಸಾರ ಕ್ರಮಕೈಗೊಳ್ಳುವುದು ಅವಶ್ಯಕವಾಗಿರುತ್ತದೆ.

1) ಮೇಲ್ಕಂಡ ಬಡಾವಣೆಯಲ್ಲಿ ವಲಯ ನಿಯಮಾವಳಿಗಳಂತೆ ಮೀಸಲಿಟ್ಟಿರುವ ಸಿ.ಎ ನಿವೇಶನವನ್ನು ಅಕ್ರಮವಾಗಿ ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿರುವ ಬಿ.ಡಿ.ಎ ಎಂಪ್ಲಾಯೀಸ್ ವೆಲ್ ಫೇರ್ ಅಸೋಸಿಯೇಷನ್(ರಿ) ಸಂಘದ ಅಧ್ಯಕ್ಷರಾದ ಶ್ರೀ.ಡಿ.ಎನ್.ಬೆಟ್ಟೇಗೌಡ ಮತ್ತು ಕಾರ್ಯದರ್ಶಿಗಳಾದ ಶ್ರೀ.ಎಂ.ಮಲ್ಲಣ್ಣ ರವರುಗಳ ವಿರುದ್ಧ ದಕ್ಷಿಣ ವಿಭಾಗದ ಸಂಬಂಧಪಟ್ಟ ಅಭಿಯಂತರರು ಸಂಬಂಧಪಟ್ಟ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣವನ್ನು ದಾಖಲು ಮಾಡುವುದು.

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆದ ಪುಟ ಸಂಖ್ಯೆ : 18 ಕಡತದ ಸಂಖ್ಯೆ: ಲಿಂಗಧೀರನಹಳ್ಳಿ ಗ್ರಾಮ

ವಿಷಯ: ಬಿ.ಡಿ.ಎ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್‌ನ [illegible] ವರದಿ

000017

| ಕಂಡಿಕೆ ಸಂಖ್ಯೆ | ಟಿಪ್ಪಣಿ ಮತ್ತು ಆಜ್ಞೆ |
|---|---|

2) ಮೇಲ್ಕಂಡ ಬಡಾವಣೆಯಲ್ಲಿ ಮೀಸಲಿಟ್ಟಿರುವ ಉದ್ಯಾನವನ/ಬಯಲುಜಾಗ, ಸಿ.ಎ, ಪಾಥ್ ವೇ ಮತ್ತು ರಸ್ತೆ ಪ್ರದೇಶಗಳೆಲ್ಲವೂ ಪ್ರಾಧಿಕಾರದ ಸ್ವತ್ತಾಗಿದ್ದು, ಉದ್ಯಾನವನ, ಸಿ.ಎ ಮತ್ತು ಪಾಥ್ ವೇ ಸ್ವತ್ತುಗಳಿಗೆಲ್ಲಾ ಮೇಲ್ಕಂಡ ಸಂಘದವರು ಚೈನ್ ಲಿಂಕ್ ಫೆನ್ಸಿಂಗ್ ಹಾಕಿ ಹಸ್ತಾಂತರ ಮಾಡಿರುತ್ತಾರೆಂದು ದಕ್ಷಿಣ ವಿಭಾಗದ ಅಭಿಯಂತರರು ಸುಳ್ಳು ಮಾಹಿತಿಯನ್ನು ನೋಂದಾಯಿತ ಪರಿತ್ಯಾಜನ ಪತ್ರ ಮತ್ತು ನೋಂದಾಯಿತ ತಿದ್ದುಪಡಿ ಪರಿತ್ಯಾಜನ ಪತ್ರದ ಮೂಲಕ ನೋಂದಾಯಿಸಿಕೊಂಡಿರುವುದು ಕಂಡುಬಂದಿದ್ದು, ಈ ವೈಫಲ್ಯಕ್ಕೆ ಕಾರಣರಾದ ಸಂಬಂಧಪಟ್ಟ ಅಭಿಯಂತರರೆಲ್ಲರ ವಿರುದ್ಧ ಶಿಸ್ತುಕ್ರಮಕೈಗೊಳ್ಳುವುದು.

3) ಮೇಲ್ಕಂಡ ಬಡಾವಣೆಗೆ ಸಂಬಂಧಿಸಿದಂತೆ ನಗರ ಯೋಜನಾ ವಿಭಾಗದವರು ದಿನಾಂಕ:27-08-2008 ರಂದು ನೀಡಿರುವ "ನಿವೇಶನಗಳ ಬಿಡುಗಡೆ ಹಿಂಬರಹ"ದಲ್ಲಿ ಬಿಡುಗಡೆ ಮಾಡಲು ಸೂಚಿಸಿರುವ ನಿವೇಶನಗಳಿಗೆ ಮಾತ್ರ, ದಕ್ಷಿಣ ವಿಭಾಗದ ಕಂದಾಯ ಅಧಿಕಾರಿಗಳು ತೆರಿಗೆ ಹಣವನ್ನು ಕಟ್ಟಿಸಿಕೊಂಡು ಖಾತಾಪತ್ರವನ್ನು ನೋಂದಣಿ ಮಾಡಬೇಕಾಗಿರುತ್ತದೆ. ಆದರೆ ಈ ಬಡಾವಣೆಯಲ್ಲಿ ಅಕ್ರಮವಾಗಿ ನೋಂದಾಯಿಸಿರುವ ಸಿ.ಎ ಜಾಗವನ್ನು ಸೇರಿದಂತೆ, ಸಂಘದವರು ಬಡಾವಣೆಯನ್ನು ಪರಿಪೂರ್ಣವಾಗಿ ಅಭಿವೃದ್ಧಿ ಪಡಿಸಿದ ನಂತರ ಬಿಡುಗಡೆ ಮಾಡಬೇಕಾಗಿರುವ ಶೇಕಡ 40 ರಷ್ಟು ನಿವೇಶನಗಳಿಗೂ ಸಹ ಪ್ರಾಧಿಕಾರದಿಂದ ಯಾವುದೇ ಅಧಿಕೃತ ಆದೇಶವಿಲ್ಲವಿದ್ದರೂ ಅಕ್ರಮವಾಗಿ ಖಾತಾಪತ್ರವನ್ನು ನೋಂದಣಿ ಮಾಡಿ, ತೆರಿಗೆ ಹಣವನ್ನು ಕಟ್ಟಿಸಿಕೊಂಡಿರುವುದು ಕಂಡುಬಂದಿದ್ದು, ಈ ಅಕ್ರಮದಲ್ಲಿ ಶಾಮೀಲಾಗಿರುವ ದಕ್ಷಿಣ ವಿಭಾಗದ ಕಂದಾಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿರುದ್ಧ ಶಿಸ್ತುಕ್ರಮಕೈಗೊಳ್ಳುವುದು.

4) ಮೇಲ್ಕಂಡ ಬಡಾವಣೆಯಲ್ಲಿ ಮೀಸಲಿಟ್ಟಿರುವ ಉದ್ಯಾನವನ, ಸಿ.ಎ, ಪಾಥ್ ವೇ ಮತ್ತು ರಸ್ತೆ ಪ್ರದೇಶಗಳೆಲ್ಲವನ್ನು ಸಂರಕ್ಷಿಸುವ ಜವಾಬ್ದಾರಿಯು ಸಂಬಂಧಪಟ್ಟ ದಕ್ಷಿಣ ವಿಭಾಗದ ಅಭಿಯಂತರರ ಕರ್ತವ್ಯವಾಗಿದ್ದು, ಬಡಾವಣೆಯಲ್ಲಿರುವ ಪ್ರಾಧಿಕಾರದ ಸ್ವತ್ತಾದ ಸಿ.ಎ ನಿವೇಶನದಲ್ಲಿ ಬೋರ್ ವೆಲ್ ನ್ನು ಕೊರೆಸಿರುವವರು ಯಾರು ಎಂಬುದು ಗೊತ್ತಿಲ್ಲವೆಂದು ಹಾಗೂ ಉದ್ಯಾನವನ, ಪಾಥ್ ವೇ ಮತ್ತು ರಸ್ತೆಗಳನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವ ವಿಚಾರ ಗೊತ್ತಿದ್ದರೂ ಸಹ, ಇದರ ಬಗ್ಗೆ ಸಂಘದವರಿಂದ ಯಾವುದೇ ಸಮಜಾಯಿಷಿಯನ್ನು ಪಡೆದುಕೊಳ್ಳದೇ ಹಾಗೂ ಒತ್ತುವರಿ ತೆರವುಗೊಳಿಸುವ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ಇರುವುದನ್ನು ಗಮನಿಡರೆ, ಅಲ್ಲಿನ ಸಂಬಂಧಪಟ್ಟ ಅಭಿಯಂತರರು ಈ ಅಕ್ರಮದಲ್ಲಿ ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಪ್ರಾಧಿಕಾರದ ಸ್ವತ್ತನ್ನು ಸಂರಕ್ಷಿಸುವಲ್ಲಿ ವಿಫಲರಾಗಿರುವ ಸಂಬಂಧಪಟ್ಟ ಎಲ್ಲಾ ಅಭಿಯಂತರರ ವಿರುದ್ಧ ಸೂಕ್ತ ಶಿಸ್ತು ಕ್ರಮಕೈಗೊಳ್ಳುವುದು.

5) ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂಬರ್ ¼(ಪಿ) 6(ಪಿ), 7/1(ಪಿ), 7/5(ಪಿ), 7/6(ಪಿ), 7/8(ಪಿ) & 7/9(ಪಿ) ಒಟ್ಟು 15 ಎಕರೆ ಜಮೀನಿಗೆ ಮೇಲ್ಕಂಡ ಸಂಘದವರ ಪರವಾಗಿ ಈಗಾಗಲೇ ಮಾರ್ಪಡಿತ ವಸತಿ ಬಡಾವಣೆ ನಕ್ಷೆಯನ್ನು ಅನುಮೋದಿಸಿದ್ದು, ಅನುಮೋದಿತ ನಕ್ಷೆಯಲ್ಲಿ ಸೂಚಿಸಿರುವ ಪ್ರತಿ ಸರ್ವೆ ನಂಬರ್ ಗಳಲ್ಲಿ ಎಷ್ಟು ಎಕರೆ ಎಷ್ಟು ಗುಂಟೆ ಜಮೀನುಗಳಿರುತ್ತದೆಂಬುದರ ಬಗ್ಗೆ, ಸಂಬಂಧಪಟ್ಟ ವಿಭಾಗದವರಿಂದ ಸ್ಪಷ್ಟ ಮಾಹಿತಿಯನ್ನು ಪಡೆದುಕೊಳ್ಳದೇ ಹಾಗೂ ಮಾಲೀಕತ್ವದ ಬಗ್ಗೆ ದೃಢೀಕರಿಸಿಕೊಳ್ಳದೇ, ಸಂಘದವರು ನೀಡಿರುವ ಮನವಿ ಪತ್ರದ ಆಧಾರದ ಮೇಲೆ ಹಾಗೂ ಭೂಸ್ವಾಧೀನ ವಿಭಾಗದ ಭೂಮಾಪಕರು ನೀಡಿರುವ ನಕ್ಷೆ & ವರದಿಯ ಆಧಾರದ ಮೇಲೆ, ಮಾರ್ಪಾಡಿತ ವಸತಿ ಬಡಾವಣೆ ನಕ್ಷೆಯನ್ನು ಮಂಜೂರು ಮಾಡಲು ಪ್ರಸ್ತಾವನೆಯನ್ನು ಪ್ರಾಧಿಕಾರದ ಸಭೆಗೆ ತಂದು, ಸಭೆಯಲ್ಲಿ ಅನುಮೋದನೆಯನ್ನು ಪಡೆಯಲು ಕಾರಣಕರ್ತರಾದ ನಗರ ಯೋಜನಾ ವಿಭಾಗದ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮಕೈಗೊಳ್ಳುವುದು.

ಟಿಪ್ಪಣಿ ಭಾಗ

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿಪ್ಪಣಿ ಹಾಳೆಯ ಪುಟ ಸಂಖ್ಯೆ : 19 ಕಡತದ ಸಂಖ್ಯೆ: [illegible]

ವಿಷಯ: ಬಿ.ಡಿ.ಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್‌ನ ವಿಚಾರಣಾ ವರದಿ

| ಕಂಡಿಕೆ ಸಂಖ್ಯೆ | 00002J ಟಿಪ್ಪಣಿ ಮತ್ತು ಆಜ್ಞೆ |
|---|---|

6) ಯಾವುದೇ ಖಾಸಗಿ ಬಡಾವಣೆಯನ್ನು ಪ್ರಾಧಿಕಾರದಿಂದ ಅನುಮೋದಿಸುವಾಗ ಬಡಾವಣೆ ನಕ್ಷೆಯಲ್ಲಿ ಪ್ರತಿ ನಾಲ್ಕನೇ ರಸ್ತೆಗೆ ಅಗಲ 12.19ಮೀಟರನ್ನು ಸೂಚಿಸಬೇಕಾಗಿರುವ ಬಗ್ಗೆ ವಲಯ ನಿಯಮಾವಳಿಗಳಲ್ಲಿ ನಿಯಮವಿರುವುದು ಕಂಡುಬಂದಿದ್ದು, ಪ್ರಶ್ನಿತ ಬಡಾವಣೆಗೆ ಪ್ರಾಧಿಕಾರದಿಂದ ನೀಡಿರುವ ಅನುಮೋದಿತಾ ವಸತಿ ಬಡಾವಣೆ ನಕ್ಷೆಯಲ್ಲಿ 05ನೇ ರಸ್ತೆಗೆ 12.19 ಮೀಟರ್ ಅಗಲವನ್ನು ಸೂಚಿಸಿರುವುದು ಕಂಡುಬಂದಿದ್ದು, ಈ ರೀತಿ ಮಾಡಲು ವಲಯ ನಿಯಮಾವಳಿಗಳಲ್ಲಿ ಅವಕಾಶವಿರುತ್ತದೆಯೇ ಎಂಬುದರ ಬಗ್ಗೆ, ನುರಿತ ಅಧಿಕಾರಿಗಳಿಂದ ಸ್ಪಷ್ಟ ಅಭಿಪ್ರಾಯವನ್ನು ಪಡೆದುಕೊಳ್ಳುವುದು. ಈ ಅಭಿಪ್ರಾಯದಲ್ಲಿ 5ನೇ ರಸ್ತೆಗೆ 12.19 ಮೀಟರನ್ನುಸೂಚಿಸಲು ಅವಕಾಶವಿರುವುದಿಲ್ಲವೆಂದು ವರದಿ ಬಂದ ಪಕ್ಷದಲ್ಲಿ ಇದಕ್ಕೆ ಕಾರಣರಾದ ನಗರ ಯೋಜನಾ ವಿಭಾಗದ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮಕೈಗೊಳ್ಳುವುದು.

7) ಮೇಲ್ಕಂಡ ಬಡಾವಣೆಗೆ ಸಂಬಂಧಿಸಿದಂತೆ ಪ್ರಾಧಿಕಾರದಿಂದ ಅಂತಿಮವಾಗಿ ನೀಡಿರುವ ಮಾರ್ಪಾಡಿತ ವಸತಿ ಬಡಾವಣೆ ನಕ್ಷೆಯಲ್ಲಿ ಮೀಸಲಿಟ್ಟಿರುವಂತೆ ರಸ್ತೆ, ಪಾಥ್ ವೇ, ಸಿ.ಎ ಹಾಗೂ ಉದ್ಯಾನವನ ಜಾಗಗಳನ್ನು ಈಗಾಗಲೇ ಮೇಲ್ಕಂಡ ಸಂಘದವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವುದರಿಂದ, ಸದರಿ ಒತ್ತುವರಿಗಳೆಲ್ಲವನ್ನೂ ತೆರವುಗೊಳಿಸಿ, ಅಂತಿಮ ಮಾರ್ಪಾಡಿತ ವಸತಿ ಬಡಾವಣೆ ನಕ್ಷೆಯಂತೆ, ಪಾಥ್ ವೇ, ಸಿ.ಎ ನಿವೇಶನ ಹಾಗೂ ಉದ್ಯಾನವನ ಜಾಗಗಳ ಹದ್ದುಬಸ್ತ್ ಗಳನ್ನು ಗುರ್ತಿಸಿಕೊಂಡು, ಈಗಾಗಲೇ ಸಿ.ಎ ಜಾಗದಲ್ಲಿ ನಿರ್ಮಿಸಿರುವ ಕಾಂಪೌಂಡ್ ಗೋಡೆಯನ್ನು ತೆರವುಗೊಳಿಸಿ, ಸಿ.ಎ ಜಾಗವನ್ನು ಸೇರಿದಂತೆ, ಪಾಥ್ ವೇ ಮತ್ತು ಉದ್ಯಾನವನ ಜಾಗಗಳಿಗೆ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸುವ ಬಗ್ಗೆ ಹಾಗೂ ಸಿ.ಎ ನಿವೇಶನದಲ್ಲಿ ಕೊರೆಸಿರುವ ಬೋರ್ ವೆಲ್ ನ್ನು ಮುಚ್ಚುವ ಬಗ್ಗೆ, ಸಂಬಂಧಪಟ್ಟ ದಕ್ಷಿಣ ವಿಭಾಗದ ಅಭಿಯಂತರರು ಕ್ರಮವನ್ನು ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ಈಗಾಗಲೇ ಪ್ರತ್ಯೇಕವಾದ ಕಡತದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳುತ್ತಿದ್ದು, ಈ ವಿಚಾರಣೆಯಲ್ಲಿಯೂ ಸಹ ಈ ಅಂಶಕ್ಕೆ ಆದೇಶವನ್ನು ನೀಡುವುದು.

32) ಮೇಲೆ ತಿಳಿಸಿರುವ ಎಲ್ಲಾ ಅಂಶಗಳ ಬಗ್ಗೆ ಕಾನೂನು ಅಧಿಕಾರಿಗಳಿಂದ ಸ್ಪಷ್ಟ ಅಭಿಪ್ರಾಯವನ್ನು ಪಡೆದುಕೊಂಡು, ನಂತರ ಮೇಲೆ ತಿಳಿಸಿರುವ ಅಂಶಗಳಿಗೆ ಸಂಬಂಧಪಟ್ಟ ವಿಭಾಗದವರು ಪ್ರಾಧಿಕಾರದ ನಿಯಮಾನುಸಾರ ಕೂಡಲೇ ಕ್ರಮಕೈಗೊಳ್ಳಲು, ಕಟ್ಟುನಿಟ್ಟಿನ ಆದೇಶವನ್ನು ನೀಡಬೇಕೆಂದು [illegible]ರುತ್ತೇನೆ.

(ಸಹಿ) 15/2/17

ಡಾ|| [illegible]

ಆರಕ್ಷಕ ಅಧೀಕ್ಷಕರು, ಬೆ.ಅ.ಪ್ರಾ.

33) ಆಯುಕ್ತರು)

(ಸಹಿ) 18-2-17

PERSONAL SECTION
OF COMMISSIONER
B.D.A.
No. 5299
Date 13/2/17

[illegible] ವಿಭಾಗ
28.56
20/2/17
[illegible]